January 2022
ವಿತ್ತಸಂಚಿಕೆ

# INSPIRE INDIA

ಸಲಹೆ ನಮ್ಮದು ಹೂಡಿಕೆ ನಿಮ್ಮದು



ಶರಣ್ ಪಾಟೀಲ್
ಆರ್ಥಿಕ ತಜ್ಞ

**INSPIRE INDIA WEALTH PRIVATE LTD.,** @ 65, 'Surasa Enclave' 1st Floor, Puttanna Road, Gandhi Bazar Basavanagudi, Bengaluru-560004, Ph: +91 8042129917, 9035414414. **Mail:** info@inspireindiafs.com **Website:** www.inspireindiafs.com



"ಉಳಿತಾಯ ಖಾತೆಗಳಲ್ಲಿ ಹಣವಿಟ್ಟು ಕೋಟ್ಯಧಿಪತಿ ಆದವರು ಯಾರಾದರೂ ಇದ್ದರೆ ನಾನು ನನ್ನ ವಾದವನ್ನೇ ನಿಲ್ಲಿಸಿಬಿಡುತ್ತೇನೆ.

–ರಾಬರ್ಟ್ ಜಿ. ಅಲನ್



"ಹೂಡಿಕೆ ಮಾಡುವ ಪ್ರಕ್ರಿಯೆ ಎಂದರೆ ನಿರ್ದಿಷ್ಟ ಉದ್ದೇಶದ ಸಾಧನೆಗೆ ಸಂಪನ್ಮೂಲ ಕ್ರೋಢೀಕರಿಸುವ ಕಾರ್ಯತಂತ್ರ.

–ಅಲನ್ ಗಾಡ್‌ಹರ್ಟ್



"ಷೇರು ಮಾರುಕಟ್ಟೆಯಲ್ಲಿ ಎಂಥವರು ತುಂಬಿದ್ದಾರೆಂದರೆ ಅವರಿಗೆ ಪ್ರತಿಯೊಂದರ ಬೆಲೆಯೂ ಗೊತ್ತಿದೆ. ಆದರೆ ಯಾವುದರ ಮೌಲ್ಯವೂ ಗೊತ್ತಿಲ್ಲ.

–ಫಿಲಿಪ್ ಫಿಷರ್

# ಪೂರ್ವಗ್ರಹದ ದಾಸರಾಗದಿರಿ

ನಾವು ಮಾಡುವ ಹೂಡಿಕೆ ಅಥವಾ ನಮ್ಮ ಹಣಕಾಸು ನಡವಳಿಕೆಗಳು ಮತ್ತು ಕ್ರಮಗಳು ನಾವು ಹೇಗೆ ಯೋಚನೆ ಮಾಡುತ್ತೇವೆ ಎಂಬುದನ್ನು ಅವಲಂಬಿಸಿರುತ್ತದೆ. ತಿಳಿದೋ, ತಿಳಿಯದೆಯೋ ಅನೇಕ ಸಂಗತಿಗಳು ನಾವು ಕೈಗೊಳ್ಳುವ ನಿರ್ಧಾರದ ಮೇಲೆ ಪರಿಣಾಮವನ್ನು ಬೀರಿರುತ್ತದೆ. ಎಷ್ಟೋ ಬಾರಿ ಅದು ನಮ್ಮ ಗ್ರಹಿಕೆಗೆ ಬಂದೇ ಇರುವುದಿಲ್ಲ. ಹೂಡಿಕೆದಾರರು ಮತ್ತು ಹಣಕಾಸು ಮಾರುಕಟ್ಟೆಗಳ ಮೇಲೆ ಮನಃಶ್ಶಾಸ್ತ್ರದ ಪರಿಣಾಮಗಳ ಬಗ್ಗೆ ನಡೆದ ಅಧ್ಯಯನ ಕೂಡ ಇದನ್ನೇ ಹೇಳುವುದು. ಎಷ್ಟೋ ಸಂದರ್ಭಗಳಲ್ಲಿ ಯಾಕೆ ಹೂಡಿಕೆದಾರರು ಸ್ವಯಂ ನಿಯಂತ್ರಣವನ್ನು ಕಳೆದುಕೊಳ್ಳುತ್ತಾರೆ, ತಮ್ಮದೇ ಹಿತಾಸಕ್ತಿಯ ವಿರುದ್ಧ ನಿರ್ಧಾರ ಕೈಗೊಳ್ಳುತ್ತಾರೆ, ವಾಸ್ತವವನ್ನು ಬಿಟ್ಟು ವ್ಯಕ್ತಿಗತವಾದ ಪೂರ್ವಗ್ರಹಗಳಿಗೇ ಹೆಚ್ಚು ಕಟ್ಟುಬೀಳುತ್ತಾರೆ ಎಂಬುದರ ಕಡೆಗೆ ಈ ಅಧ್ಯಯನವು ಹೆಚ್ಚು ಗಮನವನ್ನು ಹರಿಸಿದೆ.

ಸುದೀರ್ಘ ಅವಧಿಗೆ ಯಶಸ್ವೀ ಹೂಡಿಕೆದಾರರಾಗಬೇಕಾದರೆ ಸಾಮಾನ್ಯ ಮಾನಸಿಕ ಪೂರ್ವಗ್ರಹ ಗಳನ್ನು ಅರ್ಥ ಮಾಡಿಕೊಳ್ಳುವುದು ಮತ್ತು ಅದನ್ನು ಮೀರುವುದು ಅತ್ಯಂತ ಮುಖ್ಯ ವಿಚಾರವಾಗುತ್ತದೆ. ಇಂತಹ ಪೂರ್ವಗ್ರಹಗಳನ್ನು ಒಳಗೊಂಡ ನಿರ್ಧಾರಗಳು ಕಳಪೆ ಹೂಡಿಕೆಗಳಿಗೆ ಮತ್ತು ತಪ್ಪುಗಳಿಗೆ ದಾರಿ ಮಾಡಿಕೊಡುತ್ತವೆ. ಹೆಚ್ಚಿನ ಹೂಡಿಕೆದಾರರು ನಡವಳಿಕೆಗೆ ಸಂಬಂಧಿಸಿದ ಈ ಪೂರ್ವಗ್ರಹಗಳ ಪ್ರಭಾವಕ್ಕೆ ಒಳಗಾಗುತ್ತಾರೆ. ಯಾಕೆಂದರೆ ಅದು ಅವರ ಒಳಮನಸ್ಸಿನಲ್ಲಿ ಗಟ್ಟಿಯಾಗಿ ಕುಳಿತಿರುತ್ತದೆ. ಅನೇಕ ಬಾರಿ ಉತ್ತಮ





ಹೂಡಿಕೆದಾರರು ಎನಿಸಿಕೊಂಡವರು ಕೂಡ ಅಡ್ಡಹಾದಿಗಳನ್ನು ತುಳಿಯುವುದು, ಸರಳವಲ್ಲದ ನಿರ್ಧಾರಗಳನ್ನೂ ತೀರಾ ಸರಳವಾಗಿ ಕಾಣುವುದು ಹಾಗೂ ತೀರ್ಮಾನ ಕೈಗೊಳ್ಳುವ ವಿಚಾರದಲ್ಲಿ ಅತಿಯಾದ ಆತ್ಮವಿಶ್ವಾಸವನ್ನು ಪ್ರದರ್ಶಿಸುವುದನ್ನು ಮಾಡುತ್ತಾರೆ. ಇಂತಹ ಎಲ್ಲ ಸಂದರ್ಭಗಳಲ್ಲಿ ನಿಮ್ಮ ಪೂರ್ವಗ್ರಹಗಳನ್ನು ಅರ್ಥ ಮಾಡಿಕೊಳ್ಳುವುದು ಉತ್ತಮ. ಇದರಿಂದ ಉತ್ತಮ ನಿರ್ಧಾರಗಳನ್ನು ಕೈಗೊಳ್ಳಲು, ಅಪಾಯಗಳನ್ನು ಕಡಿಮೆ ಮಾಡಲು ಹಾಗೂ ಕಾಲಕಾಲಕ್ಕೂ ದಕ್ಕುವ ಹೂಡಿಕೆಯ ಆದಾಯಗಳನ್ನು ಸುಧಾರಿಸಲು ಸಾಧ್ಯವಾಗುತ್ತದೆ.

ಸಾಮಾನ್ಯವಾಗಿ ಕೆಟ್ಟ ಹೂಡಿಕೆಯ ನಿರ್ಧಾರಗಳಿಗೆ ಕಾರಣವಾಗುವ ಪ್ರಮುಖ ನಡುವಳಿಕೆಯ ಪೂರ್ವಗ್ರಹಗಳ ಕೆಲವು ಸಾಮಾನ್ಯ ಉದಾಹರಣೆಗಳನ್ನು ನೋಡೋಣ:

ದೃಢೀಕರಣದ ಪೂರ್ವಗ್ರಹ: ಈಗ ಕೈಗೊಂಡಿರುವ ನಿರ್ಧಾರವನ್ನು ದೃಢೀಕರಿಸುವ ಮಾಹಿತಿಯನ್ನು ಪಡೆಯುವುದು ಮನುಷ್ಯನ ಸಾಮಾನ್ಯ ಪ್ರವೃತ್ತಿಯಾಗಿರುತ್ತದೆ. ದೃಢೀಕರಣ ಪೂರ್ವಗ್ರಹವು ಹೂಡಿಕೆಯ ತಪ್ಪುಗಳಿಗೆ ದಾರಿ ಮಾಡಿಕೊಡುತ್ತದೆ. ಯಾಕೆಂದರೆ ಹೂಡಿಕೆದಾರರು ತಾವು ಮಾಡಿದ ನಿರ್ಧಾರಗಳನ್ನು ದೃಢೀಕರಿಸುವಂತಹ ಮಾಹಿತಿಗಳನ್ನೇ ಅವರು ಸಾಮಾನ್ಯವಾಗಿ ಸ್ವೀಕರಿಸುತ್ತಿರುತ್ತಾರೆ. ಇದರಿಂದಾಗಿ ಅವರು ಅತಿಯಾದ ಆತ್ಮವಿಶ್ವಾಸವನ್ನು

ಒಳಪುಟ ನೋಟ...



ಡಿಜಿಟಲ್ ವಂಚನೆ

ಕಳ್ಳಕಿಂಡಿ: ರಕ್ಷಣೆಗಿವೆ ಮಾರ್ಗಗಳು

ಪುಟ 3



ಬದುಕಿನ ಅನಿಶ್ಚಿತತೆ ಇರಲಿ ಟರ್ಮ್ ಇನ್ಶೂರೆನ್ಸ್ ಬಲ

ಪುಟ 5

ಹೊಂದಿರುತ್ತಾರೆ. ಇಂತಹ ಅತಿಯಾದ ಆತ್ಮವಿಶ್ವಾಸ ತಾವು ಕೈಗೊಂಡ ನಿರ್ಧಾರ ತಪ್ಪಾಗುವ ಸಾಧ್ಯತೆಯೇ ಇಲ್ಲ ಎಂಬ ಹುಸಿ ಪ್ರಜ್ಞೆಗೆ ಸಿಲುಕುವ ಸಾಧ್ಯತೆ ಇರುತ್ತದೆ. ಇಂತಹ ಕುರುಡು ನಂಬಿಕೆಗಳಿಂದಾಗಿ ಏನಾದರೂ ತಪ್ಪುಗಳುಂಟಾದರೆ ಅಪಾಯದ ಸಾಧ್ಯತೆಗಳು ಅಧಿಕವಾಗಿರುತ್ತದೆ. ಇಂತಹ ಪೂರ್ವಗ್ರಹವನ್ನು ಕಡಿಮೆಮಾಡಬೇಕಾದರೆ ಯಥಾಸ್ಥಿತಿಯನ್ನು ಪ್ರಶ್ನಿಸುವ ಮತ್ತು ನಿಮ್ಮ ಹೂಡಿಕೆಯ ಆಯ್ಕೆಗಳನ್ನು ಪ್ರಶ್ನಿಸುವಂತಹ ಮಾಹಿತಿಗಳನ್ನು ಪಡೆಯುತ್ತಿರಬೇಕು.

**ಮಾಹಿತಿಯಲ್ಲಿನ ಪೂರ್ವಗ್ರಹ:** ಒಂದು ಸಮಸ್ಯೆ ಅಥವಾ ವಿಷಯವನ್ನು ಅರ್ಥ ಮಾಡಿಕೊಳ್ಳುವಲ್ಲಿ ಅನುಪಯುಕ್ತವಾಗಿದ್ದರೂ ಕೂಡ ಅಂತಹ ಮಾಹಿತಿಯನ್ನು ಮೌಲ್ಯಮಾಪನ ಮಾಡುವುದು ಈ ಪೂರ್ವಗ್ರಹದ ಪ್ರವೃತ್ತಿಯಾಗಿರುತ್ತದೆ. ಹಣಕಾಸು ವಿಶ್ಲೇಷಣೆ, ಪತ್ರಿಕೆಗಳು ಮತ್ತು ಷೇರುದಲ್ಲಾಳಿಗಳಿಂದ ಪ್ರತಿದಿನವೂ ಮಹತ್ವವಲ್ಲದ ಮತ್ತು ನಿಷ್ಪ್ರಯೋಜಕ ಮಾಹಿತಿಗಳ ಸುರಿಮಳೆಯೇ ಹೂಡಿಕೆದಾರರ ಮೇಲೆ ಆಗುತ್ತಿರುತ್ತದೆ. ಸಮರ್ಪಕವಾದ ಮಾಹಿತಿಯ ಮೇಲೆ ಮಾತ್ರ ಗಮನ ಕೇಂದ್ರೀಕರಿಸಿ ಅದನ್ನು ಜರಡಿ ಹಿಡಿಯುವುದು ನಿಜಕ್ಕೂ ಕಷ್ಟದ ಕೆಲಸ. ಒಟ್ಟಾರೆಯಾಗಿ ಹೂಡಿಕೆದಾರರು ಅಲ್ಪಾವಧಿ ಮಾರುಕಟ್ಟೆ ಚಲನೆಗಳನ್ನು ನಿರ್ಲಕ್ಷಿಸಿ ಹೂಡಿಕೆ ಮತ್ತು ಆಸ್ತಿ ವರ್ಗಗಳಿಗೆ ಒತ್ತು ನೀಡುವ ಸುದೀರ್ಘಾವಧಿಯ ಅಂಶಗಳಿಗೆ ಆದ್ಯತೆಯನ್ನು ನೀಡಿದರೆ ಅವರು ಶ್ರೇಷ್ಠವಾದ ಹೂಡಿಕೆ ನಿರ್ಧಾರಗಳನ್ನು ಕೈಗೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ರೂಢಿಯಲ್ಲಿರುವ ಮಾರುಕಟ್ಟೆ ಸುದ್ದಿಗಳನ್ನು ನಿರ್ಲಕ್ಷಿಸುವ ಮೂಲಕ ಹೂಡಿಕೆದಾರರು ಹೂಡಿಕೆ ಸಂಬಂಧಿ ನಿರ್ಧಾರದ ಪ್ರಕ್ರಿಯೆಯಲ್ಲಿ ಮಾಹಿತಿ ಪೂರ್ವಗ್ರಹದ ಅಪಾಯಕಾರಿ ಮೂಲವನ್ನು ಮೀರಲು ಸಾಧ್ಯವಿದೆ.


**ನಷ್ಟದ ನಿವಾರಣೆ/ದತ್ತಿ ಪ್ರಭಾವ:** ಜನರು ಲಾಭವನ್ನು ಗಳಿಸುವುದಕ್ಕಿಂತ ಹೆಚ್ಚಾಗಿ ನಷ್ಟವನ್ನು ತಪ್ಪಿಸುವುದಕ್ಕೇ ಹೆಚ್ಚಿನ ಆದ್ಯತೆಯನ್ನು ನೀಡುವ ಪ್ರವೃತ್ತಿ ಇದಾಗಿದೆ. ಅದೇ ರೀತಿ ದತ್ತಿ ಪ್ರಭಾವ ಎಂದರೆ ಜನರು ತಾವು ಹೊಂದಿಲ್ಲದೇ ಇರುವ ಅನನ್ಯವಾದ ಉತ್ತಮ ಸಂಗತಿಗಿಂತ ಮಿಗಿಲಾಗಿ ತಾವು ಹೊಂದಲಿರುವ ಅಥವಾ ಈಗಾಗಲೇ ಹೊಂದಿರುವ ಉತ್ತಮ ಸಂಗತಿಗೆ ಹೆಚ್ಚಿನ ಮೌಲ್ಯವನ್ನು ನೀಡಿದಾಗ ಇದು ಉಂಟಾಗುತ್ತದೆ. ತಮ್ಮ ಹಣ ಒಂದಲ್ಲ ಒಂದು ದಿನ ಬಂದೇ ಬರುತ್ತದೆ ಎಂಬ ಆಶಯದಿಂದ ಹೂಡಿಕೆದಾರರು ನಷ್ಟದಲ್ಲಿರುವ ಹೂಡಿಕೆಗಳನ್ನು ಮಾರಾಟ ಮಾಡಲು ನಿರಾಕರಿಸುವುದು ನಷ್ಟದ ನಿವಾರಣೆ ಅಥವಾ ದತ್ತಿ ಪರಿಣಾಮಕ್ಕೆ ಉತ್ತಮ ಉದಾಹರಣೆಯಾಗಿದೆ. ಇಂತಹ ಒಂದು ಪೂರ್ವಗ್ರಹ ಅತ್ಯಂತ ಮಹತ್ವದ ಆರ್ಥಿಕ ನಿಯಮವನ್ನು ಉಲ್ಲಂಘಿಸುತ್ತದೆ– ಅವಕಾಶದ ವೆಚ್ಚವನ್ನು ಅಳತೆ ಮಾಡುವುದು. ಕಾಲಾನುಕಾಲಕ್ಕೆ ಹೂಡಿಕೆಯಲ್ಲಿ ಯಶಸ್ವಿಯಾಗಲು ಯಾವತ್ತೂ ಅವಕಾಶದ ವೆಚ್ಚವನ್ನು ಕರಾರುವಕ್ಕಾಗಿ ಅಳತೆ ಮಾಡಬೇಕೇ ಹೊರತು ನಷ್ಟಗಳನ್ನು ತಪ್ಪಿಸುವ ಪ್ರವೃತ್ತಿಯೊಂದಿಗೆ ಹಿಂದಿನ ಹೂಡಿಕೆ ನಿರ್ಧಾರಗಳಿಗೆ ಕಟ್ಟುಬೀಳುವುದಲ್ಲ.

**ಗೆದ್ದೆತ್ತಿನ ಬಾಲ ಹಿಡಿಯುವ ನಡವಳಿಕೆ:** ಯಾವುದಾದರೊಂದಲ್ಲಿ ಆರಾಮವಾಗಿ ಇದ್ದುಬಿಡುವುದು ಇಂತಹ ವ್ಯಕ್ತಿಗಳ ಮನೋಭಾವನೆ. ಯಾಕೆಂದರೆ ಅನೇಕ ಮಂದಿ ಇದನ್ನೇ ಮಾಡುವುದು ಅಥವಾ ನಂಬುವುದು. ವದಂತಿಗಳಿಂದ ಹುಟ್ಟಿಕೊಳ್ಳುವ ಗುಳ್ಳೆಗಳು ಹೀಗೆ ಇರುತ್ತವೆ. ಇದನ್ನು ಸಾಮಾನ್ಯವಾಗಿ ಗೆದ್ದೆತ್ತಿನ ಬಾಲ ಹಿಡಿಯುವುದು ಅಥವಾ ಮಂದೆಯಲಿ ಒಂದಾಗುವ ಮನೋಭಾವ ಎನ್ನುತ್ತೇವೆ. ಒಬ್ಬ ಯಶಸ್ವಿ ಹೂಡಿಕೆದಾರನಾಗಬೇಕಾದರೆ ನೀವು ಸ್ವತಂತ್ರವಾಗಿ ವಿಶ್ಲೇಷಣೆ ಮಾಡುವ ಚಿಂತಿಸುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕು. ಇತರರು ಇದನ್ನು ಒಪ್ಪುತ್ತಾರೋ ಇಲ್ಲವೋ ಎನ್ನುವ ಯೋಚನೆ ನಿಮಗೆ ಬೇಡ. ಇದಕ್ಕೆ ಸುಲಭ ಪರಿಹಾರ ಏನೆಂದರೆ ವಸ್ತುನಿಷ್ಠವಾಗಿರುವುದು, ವಾಸ್ತವ ಸಂಗತಿಗಳನ್ನು ಅರ್ಥ ಮಾಡಿಕೊಳ್ಳುವುದು ಮತ್ತು ಭಯ ಅಥವಾ ದುರಾಸೆಯ ಪ್ರಭಾವಕ್ಕೆ ಒಳಗಾಗುವ ವಿಚಾರದಲ್ಲಿ ಮುಕ್ತ ಮನಸ್ಸನ್ನು ಹೊಂದಿರುವುದು.

## ನಿಕಟತನದ ಪೂರ್ವಗ್ರಹ

ಆಹಾರ, ವ್ಯಕ್ತಿಗಳು ಅಥವಾ ಸ್ಥಳಗಳ ವಿಚಾರದಲ್ಲಿ ನಾವು ಸಾಮಾನ್ಯವಾಗಿ ನಮಗೆ ನಿಕಟವಾಗಿ ಪರಿಚಯವಿರುವ ಸಂಗತಿಗಳ ಬಗ್ಗೆ ಆಯ್ಕೆಯನ್ನು ಮಾಡಿಕೊಳ್ಳುತ್ತೇವೆ. ನಾವು ಯಾವತ್ತೂ ಆರಾಮವಾಗಿರಲು ಬಯಸುತ್ತೇವೆ. ನಮಗೆ ಬದಲಾವಣೆಯನ್ನು ಮಾಡುವುದು ಅಥವಾ ಹೊಸ ವಿಚಾರಗಳ ಬಗ್ಗೆ ಯೋಚನೆ ಮಾಡುವುದನ್ನು ನಾವು ದ್ವೇಷಿಸುತ್ತೇವೆ. ಉದಾಹರಣೆಗೆ, ಒಬ್ಬ ವ್ಯಕ್ತಿ ತನ್ನ ಉತ್ತಮ ಹಿತಾಸಕ್ತಿಯ ಹಿನ್ನೆಲೆಯಲ್ಲಿ ಬ್ಯಾಂಕ್ ಠೇವಣಿಯಂತಹ ಸಾಂಪ್ರದಾಯಿಕ ಉತ್ಪನ್ನಗಳಲ್ಲಿ ಹೂಡಿಕೆಯನ್ನು ಮಾಡಲು ನಿರ್ಧರಿಸಿದರೆ ಈಕ್ವಿಟಿಯಲ್ಲಿ ಹೂಡಿಕೆ ಮಾಡಲು ನಿಶ್ಚಿತವಾಗಿ ತನ್ನದೇ ಆದ ಸಮಯವನ್ನು ತೆಗೆದುಕೊಳ್ಳುತ್ತದೆ. ಇದು ತಿಳಿಯದೇ ಹೂಡಿಕೆದಾರರನ್ನು ವಿವೇಚನಾಯುಕ್ತ ಹೂಡಿಕೆಯಿಂದ ದೂರ ಉಳಿಯುವಂತೆ ಮಾಡುತ್ತದೆ. ತಮಗೆ ಹೆಚ್ಚು ಪರಿಚಿತವಿರುವ, ನಿಕಟವಿರುವ ಹೆಸರಿನ ಉದ್ಯಮಗಳ ಉತ್ಪನ್ನಗಳಿಗೆ ಮತ್ತು ಆಸ್ತಿಗಳಿಗೇ ಹೆಚ್ಚಿನ ಆದ್ಯತೆಯನ್ನು ನೀಡುತ್ತಾರೆ. ಹೂಡಿಕೆಯ ಮಾತಿನಲ್ಲಿಯೇ ಹೇಳುವುದಾದರೆ, ಈ ರೀತಿ ಪರಿಚಿತ ಪೂರ್ವಗ್ರಹವನ್ನು ಬೆಳೆಸಿಕೊಂಡರೆ ಪರಿಚಿತವಲ್ಲದ ಆದರೆ ಉತ್ತಮವಾಗಿರುವ ಆಸ್ತಿಗಳಲ್ಲಿ ಹೂಡಿಕೆ ಮಾಡದಂತೆ ನಮಗೆ ನಾವು ಕಡಿವಾಣ ಹಾಕಿಕೊಂಡಂತಾಗುತ್ತದೆ.





**ಒಂದನ್ನೇ ನಂಬುವುದು:** ಇಂತಹ ಪೂರ್ವಗ್ರಹ ಪ್ರವೃತ್ತಿಯಲ್ಲಿ, ನಿರ್ಧಾರವನ್ನು ಕೈಗೊಳ್ಳುವಾಗ ಯಾವುದಾದರೊಂದು ಹಳೆಯ ಉದಾಹರಣೆಯಿದ್ದರೆ ಅಥವಾ ಒಂದು ಮಾಹಿತಿಯಿದ್ದರೆ ಅದನ್ನೇ ಬಲವಾಗಿ ನಂಬಿಕೊಂಡಿರುವುದು. ಈ ರೀತಿಯ ಪೂರ್ವಗ್ರಹಕ್ಕೆ ಸಿಲುಕಿದರೆ ಹೂಡಿಕೆದಾರರ ಸಂಶೋಧನಾ ಮನಸ್ಥಿತಿಯನ್ನು ಸಂಪೂರ್ಣವಾಗಿ ಹಾಳುಗೆಡವುತ್ತದೆ. ಒಂದು ಹೂಡಿಕೆಯ ದೃಷ್ಟಿಕೋನದಲ್ಲಿ ಸ್ಪಷ್ಟವಾಗಿ ನಂಬುವ ಸಂಗತಿ ಎಂದರೆ ಇತ್ತೀಚಿನ ಷೇರು ಬೆಲೆ. ಆದರೆ ಅನೇಕ ಮಂದಿ ತಮ್ಮ ಹೂಡಿಕೆಯ ನಿರ್ಧಾರಗಳನ್ನು ಕೈಗೊಳ್ಳುವ ಸಂದರ್ಭದಲ್ಲಿ ಅದರ ಇತಿಹಾಸಕ್ಕೆ ತಳಕು ಹಾಕಿಕೊಂಡಿರುವ ಈಗಿನ ಬೆಲೆಯನ್ನು ಗಮನಿಸುತ್ತಾರೆ. ದುರಾದೃಷ್ಟದ ಸಂಗತಿ ಎಂದರೆ ಈಗಿನ ಸ್ಥಿತಿಯಲ್ಲಿ ಷೇರು ಅಗ್ಗವಾಗಿದೆಯೋ ಅಥವಾ ದುಬಾರಿಯಾಗಿದೆಯೋ ಎಂಬ ಮಾಹಿತಿಯನ್ನು ನೆಚ್ಚಿಕೊಳ್ಳುವುದಿಲ್ಲ.

**ತಪ್ಪು ನಿರ್ಧಾರದಿಂದಾಗುವ ಕುಸಿತ:** ಜನರು ಸಾಮಾನ್ಯವಾಗಿ ಒಮ್ಮೆ ಭಾವನೆಗಳ ವಿಚಾರದಲ್ಲಿ, ಸಮಯ, ಪ್ರಯತ್ನ ಅಥವಾ ಹಣದ ವಿಚಾರದಲ್ಲಿ ಪ್ರಯತ್ನಗಳನ್ನು, ನಿರ್ಧಾರಗಳನ್ನು ಮಾಡಿದರೆ ಅದನ್ನು ನಿರಂತರವಾಗಿ ಮುಂದುವರಿಸಿಕೊಂಡು ಹೋಗುತ್ತಾರೆ. ಇದು ಸಂಬಂಧ, ಉದ್ಯೋಗ, ವ್ಯಾಪಾರ ಮುಂತಾದ ವಿಚಾರಗಳಲ್ಲಿ ಇಂತಹ ಯೋಚನೆ ಸರಿಯೇ ಆಗಿರಬಹುದು, ಆದರೆ ಹೂಡಿಕೆ ವಿಚಾರದಲ್ಲಿ ಅಲ್ಲ. ಈ ಕಾರಣದಿಂದಲೇ ನಮಗೆ ವಿವೇಚನಾಯುತ ಎಂದು ಅನಿಸದೇ ಇದ್ದರೂ ಕೂಡ ನಾವು ಆ ಹೂಡಿಕೆಯನ್ನು ಮುಂದುವರಿಸಿಕೊಂಡು ಹೋಗುತ್ತೇವೆ. ನಾವು ಅದಕ್ಕೆ ಅಂಟಿಕೊಂಡಿರುತ್ತೇವೆ, ನಾವು ನಮ್ಮ ನಷ್ಟಗಳನ್ನು ಕಡಿತಗೊಳಿಸುವುದಿಲ್ಲ ಬದಲಾಗಿ ನಮ್ಮ ಶ್ರಮದ ಹಣವನ್ನು ಅಲ್ಲಿ ತೊಡಗಿಸುತ್ತ ಹೋಗುತ್ತೇವೆ. ವಿವೇಚನಾಯುತ ನಿರ್ಧಾರಗಳನ್ನು ನಿರಾಕರಿಸುತ್ತೇವೆ ಮತ್ತು ಉತ್ತಮ ಅವಕಾಶಗಳನ್ನು ದೂರ ತಳ್ಳುತ್ತೇವೆ.

**ಒಟ್ಟಾರೆ:** ಮೇಲೆ ಪ್ರಸ್ತಾಪ ಮಾಡಿದವು ನಡವಳಿಕೆಗೆ ಸಂಬಂಧಿಸಿದ ಕೆಲವೇ ಕೆಲವು ಪೂರ್ವಗ್ರಹಗಳು. ಅವುಗಳನ್ನು ಸಾಹಿತ್ಯದಲ್ಲಿ ಸಾಮಾನ್ಯವಾಗಿ ಆಗಾಗ ಉಲ್ಲೇಖಿಸಲಾಗುತ್ತದೆ. ಅನುಭವಗಳ ಮೂಲಕ, ಸಂಶೋಧನೆಯ ಮೂಲಕ ಅನೇಕ ಅರಿವಿನ ಪೂರ್ವಗ್ರಹಗಳನ್ನು ಗುರುತಿಸಲಾಗಿದೆ. ಅದನ್ನು ನಾವು ಹಣಕಾಸು ನಿರ್ಧಾರಗಳಿಗೂ ಅನ್ವಯ ಮಾಡಬಹುದಾಗಿದೆ. ಹೂಡಿಕೆದಾರರಾದ ನಮಗೆ ನಮ್ಮ ಒಳಮನಸ್ಸಿಗೆ ತಕ್ಕುದಾದುದನ್ನು ಸ್ವೀಕರಿಸುತ್ತಾ ಹೋಗುತ್ತೇವೆ. ಇಂತಹ ನಡವಳಿಕೆಗೆ ಸಂಬಂಧಿಸಿದ ಅಥವಾ ನಮ್ಮ ಅರಿವಿಗೆ ಸಂಧಿಸಿದ ಪೂರ್ವಗ್ರಹಗಳು, ಪ್ರವೃತ್ತಿಗಳು ನಮ್ಮ ಹಣಕಾಸು ನಿರ್ಧಾರಗಳ ಮೇಲೆ ಪರಿಣಾಮ ಬೀರುತ್ತಾ ನಮ್ಮ ಕನಸುಗಳನ್ನು ರೂಪಿಸುತ್ತವೆ ಅಥವಾ ಮುರಿಯುತ್ತವೆ. ಹೂಡಿಕೆ ಸಂಬಂಧಿ ನಡವಳಿಕೆ ಮತ್ತು ನಿರ್ಧಾರ ಕೈಗೊಳ್ಳುವ ಪ್ರವೃತ್ತಿಯು ಹೂಡಿಕೆಯ ಹೃದಯದಲ್ಲಿಯೇ ಇದೆ ಎನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ. ಅದೇ ನಿಮ್ಮ ಯಶಸ್ಸಿಗೆ ನಿರ್ಣಾಯಕ ಎನ್ನುವುದು ಕೂಡ ಸತ್ಯ.

ಬುದ್ಧಿವಂತ ಹೂಡಿಕೆದಾರರಾಗಿ ಇಂತಹ ಆಸಕ್ತಿದಾಯಕ ವಿಷಯದ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಬೇಕು ಮತ್ತು ನಿರ್ಧಾರ ಕೈಗೊಳ್ಳುವ ಸಂದರ್ಭದಲ್ಲಿ ಈ ಎಲ್ಲ ಪೂರ್ವಗ್ರಹಗಳನ್ನು, ಭಾವನೆಗಳನ್ನು ನಿಯಂತ್ರಿಸಬೇಕು ಅಥವಾ ತೊಡೆದು ಹಾಕಬೇಕು. ಹಣಕಾಸು ನಿರ್ಧಾರಗಳು ಯಾವತ್ತೂ ವಸ್ತುನಿಷ್ಠವಾಗಿರಬೇಕು, ದತ್ತಾಂಶವನ್ನು ಆಧರಿಸಿದ್ದಾಗಿರಬೇಕು ಮತ್ತು ಸಂಪೂರ್ಣವಾಗಿ ಅರ್ಹತೆಯ ಮೇಲೆ ನಡೆಯಬೇಕೇ ಹೊರತು ಬೇರೆ ಇನ್ನಾವುದೇ ವಿಷಯದ ಮೇಲೆ ಅಲ್ಲ ಎಂಬುದನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕು. ನಮ್ಮ ಹೂಡಿಕೆಯ ಪಯಣದಲ್ಲಿ ನಾವು ಇನ್ನಷ್ಟು ಪಕ್ವವಾಗುತ್ತಿದ್ದಂತೆ ತಾರ್ಕಿಕ ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯ ಕಡೆಗೆ ಕೆಲಸ ಮಾಡುತ್ತ ಹೋಗಬೇಕು. ನಮ್ಮ ಗಮನ ಯಾವತ್ತೂ ಫಲಿತಾಂಶಕ್ಕಿಂತ ಪ್ರಕ್ರಿಯೆಯ ಮೇಲೆ ಇರಬೇಕು. ವಾರೆನ್ ಬಫೆಟ್ ಅವರ ಮಾತಿನಲ್ಲಿಯೇ ಹೇಳಬೇಕೆಂದರೆ, “25ರ ಮೇಲೆ ಹೂಡಿಕೆಯ ಯಶಸ್ಸು ಬುದ್ಧಿಮತ್ತೆಗೆ ಸಂಬಂಧಿಸಿದ್ದಾಗಿರುವುದಿಲ್ಲ. ಒಮ್ಮೆ ನೀವು ಸಾಮಾನ್ಯ ಬುದ್ಧಿವಂತಿಕೆಯನ್ನು ಹೊಂದಿದ ಬಳಿಕ ನಿಮಗೆ ಅಗತ್ಯವಿರುವುದು ಇತರರನ್ನು ಸಮಸ್ಯೆಗೆ ಸಿಲುಕಿಸುವಂತಹ ಪ್ರೇರಣೆಯನ್ನು ನಿಯಂತ್ರಿಸುವ ಮನೋಧರ್ಮ”. ಯಶಸ್ಸಿಗೆ ಬುದ್ಧಿವಂತಿಕೆ ಅಥವಾ ಜ್ಞಾನವು ಮುಖ್ಯವಾಗುವುದಿಲ್ಲ– ಇಲ್ಲಿ ನಿರ್ಣಾಯಕ ಅಂಶವಾಗಿರುವುದು ನಿಮ್ಮ ನಡವಳಿಕೆ ಮಾತ್ರ.



# ಡಿಜಿಟಲ್ ವಂಚನೆ

## ಕಳ್ಳಕಿಂಡಿ: ರಕ್ಷಣೆಗಿವೆ ಮಾರ್ಗಗಳು

ನಾವು ಅಕ್ಷರಶಃ ಡಿಜಿಟಲ್ ಯುಗದಲ್ಲಿ ಬದುಕುತ್ತಿದ್ದೇವೆ. ನೋಟು ಅಮಾನ್ಯೀಕರಣ ಮತ್ತು ಪ್ಯಾಂಡಮಿಕ್ ಬಳಿಕ ಬಹುತೇಕ ಭಾರತೀಯರು ಆನ್‌ಲೈನ್ ವಹಿವಾಟನ್ನು ಬಹುದೊಡ್ಡ ಮಟ್ಟದಲ್ಲಿಯೇ ಒಪ್ಪಿಕೊಂಡು ಬಿಟ್ಟಿದ್ದಾರೆ. ಇತ್ತೀಚೆಗೆ ಒಂದು ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿತ್ತು; ಬೀದಿಯಲ್ಲಿ ಬಸವನನ್ನು ಆಡಿಸುತ್ತ ಸಂಗೀತ ನುಡಿಸುತ್ತ ದಾನವನ್ನು ಕೇಳುತ್ತಿದ್ದ ವ್ಯಕ್ತಿ ಹಣವನ್ನು ಸ್ವೀಕರಿಸಲು ಬಸವನ ಕೊಂಬಿಗೆ ಸಿಕ್ಕಿಸಿದ್ದ ಕ್ಯೂಆರ್ ಕೋಡ್‌ನ್ನು ಬಳಸಿದ್ದ. ಇದು ಭಾರತದಲ್ಲಿ ಡಿಜಿಟಲ್ ಪಾವತಿ ಯಾವ ಪ್ರಮಾಣದಲ್ಲಿ ವ್ಯಾಪಕವಾಗಿ ಹೋಗಿದೆ ಎಂಬುದಕ್ಕೆ ಇದು ಸ್ಪಷ್ಟ ಉದಾಹರಣೆಯಾಗಿದೆ. ಇಂದು ದೊಡ್ಡ ವ್ಯಾಪಾರಿ ಸಂಸ್ಥೆಗಳು ಮಾತ್ರ ಆನ್‌ಲೈನ್ ಪೇಮೆಂಟ್ ಮಾರ್ಗವನ್ನು ಅನುಸರಿಸುತ್ತಿಲ್ಲ ಬದಲಾಗಿ ಸಣ್ಣ ಸಣ್ಣ ವ್ಯಾಪಾರಿಗಳು ಕೂಡ ಡಿಜಿಟಲ್ ದಾರಿಯನ್ನು ಕಂಡುಕೊಂಡಿದ್ದಾರೆ ಎಂಬುದು ಈಗಿನ ಟ್ರೆಂಡ್‌ನಿಂದ ಗೊತ್ತಾಗುತ್ತದೆ. ಇಷ್ಟು ಮಾತ್ರವಲ್ಲದೆ ಇದು ಕೇವಲ ನಗರಗಳಿಗೆ ಮಾತ್ರ ಸೀಮಿತವಾಗಿಲ್ಲ, ಹಳ್ಳಿ ಹಳ್ಳಿಗಳಿಗೂ ಇದು ವ್ಯಾಪಿಸಿದೆ. ಡಿಜಿಟಲ್ ಪ್ರಗತಿಯಲ್ಲಿ ಮುಂಚೂಣಿಯಲ್ಲಿರುವ ರಾಷ್ಟ್ರಗಳಲ್ಲಿ ಭಾರತ ಸಾಕಷ್ಟು ಮುನ್ನಡೆಯನ್ನು ಸಾಧಿಸಿದೆ. ಅನೇಕ ವಿಷಯಗಳಲ್ಲಿ ಜಾಗತಿಕ ನಾಯಕನೂ ಹೌದು ಎನ್ನುವುದರಲ್ಲಿ ಅನುಮಾನವಿಲ್ಲ.

**ಕೆವೈಸಿ/ಗುರುತಿನ ವಂಚನೆ:** ಪ್ಯಾಂಡಮಿಕ್ ಹಿನ್ನೆಲೆಯಲ್ಲಿ ಬಹುತೇಕ ಗ್ರಾಹಕರು ಬ್ಯಾಂಕ್ ಶಾಖೆಗಳಿಗೆ ಭೇಟಿ ನೀಡುವುದನ್ನು ನಿಲ್ಲಿಸಿ ಡಿಜಿಟಲ್ ಬ್ಯಾಂಕಿಂಗ್ ಆಯ್ಕೆ ಮಾಡಿಕೊಂಡಿದ್ದಾರೆ. ಇದರಿಂದಾಗಿ ವಂಚಕರು ಕೆವೈಸಿಯನ್ನು ಅಸ್ತ್ರವನ್ನಾಗಿ ಬಳಸಿಕೊಂಡು ಅನಧಿಕೃತ ಎಸ್‌ಎಂಎಸ್ ಕಳುಹಿಸುವ ಅಥವಾ ಕರೆಗಳನ್ನು ಮಾಡುವ ಮೂಲಕ ಬ್ಯಾಂಕ್‌ನವರಂತೆ ಸೋಗು ಹಾಕುವ ಪ್ರಯತ್ನ ನಡೆಸಿದ್ದಾರೆ. ಬ್ಯಾಂಕಿನ ಗ್ರಾಹಕರಲ್ಲಿ ಖಾತೆಯ ವಿವರಗಳು ಅಥವಾ ಲಾಗಿನ್ ವಿವರಗಳು, ಕಾರ್ಡ್, ಪಿನ್. ಓಟಿಪಿ ಇತ್ಯಾದಿ ಮಾಹಿತಿಗಳನ್ನು ಪಡೆದುಕೊಂಡು ಕೆವೈಸಿ ಪರಿಶೀಲನೆಯ ಅಡಿಯಲ್ಲಿ ಈ ವಿವರಗಳನ್ನು ಪಡೆಯುತ್ತಿರುವುದಾಗಿ ಗ್ರಾಹಕರಲ್ಲಿ ಭೀತಿಯನ್ನು ಉಂಟುಮಾಡುತ್ತಿದ್ದಾರೆ. ಇಂತಹ ಪ್ರಶ್ನೆಗಳನ್ನು ಕೇಳಿದರೆ ಹಣಕಾಸು ವಂಚನೆಗೆ ರಹದಾರಿ ಒದಗಿಸಿದಂತೇ ಸರಿ. ಯಾವತ್ತೂ ಎಂದಿಗೂ ನಿಮ್ಮ ವೈಯಕ್ತಿಕ ವಿವರಗಳು, ಓಟಿಪಿ, ಕ್ರೆಡಿಟ್/ಡೆಬಿಟ್ ಕಾರ್ಡ್ ವಿವರಗಳು, ಪಿನ್ ಇತ್ಯಾದಿ ವಿವರಗಳನ್ನು ಯಾರಿಗೂ ನೀಡಬೇಡಿ. ಬ್ಯಾಂಕ್‌ನವರು ಇದನ್ನು ಎಂದಿಗೂ ಕೇಳವುದೂ ಇಲ್ಲ.

ಫೋನ್ ಅಥವಾ ಯಾವುದೇ ಮೂರನೇ ವ್ಯಕ್ತಿಯ ಮೂಲಕ ಅಥವಾ ಇನ್ನಿತರ ಯಾವುದೇ ಆ್ಯಪ್‌ಗಳ ಮೂಲಕ ಹಣಕಾಸು ಸಂಸ್ಥೆಯ ಯಾವುದೇ ಒಬ್ಬ ಅಧಿಕೃತ ವ್ಯಕ್ತಿ ಈ ರೀತಿಯ ಮಾಹಿತಿಗಳನ್ನು ಕೇಳುವುದಿಲ್ಲ. ಇಂತಹ ವಿಚಾರದಲ್ಲಿ ಯಾವತ್ತೂ ನಿಮ್ಮ ಬ್ಯಾಂಕ್, ಬ್ರೋಕರ್ ಮುಂತಾದವರ ಸಂಪರ್ಕದಲ್ಲಿರಿ, ಮುಖಾಮುಖಿ ಅಥವಾ ಸೂಕ್ತವಾದ ಆನ್‌ಲೈನ್ ಡೆಸ್ಕ್/ಆ್ಯಪ್‌ಗಳ ಮೂಲಕ ಸಂಪರ್ಕದಲ್ಲಿರಿ. ಯಾವುದೇ ಕಾರಣಕ್ಕೂ ವೆಬ್ ಸರ್ಚ್‌ಗಳನ್ನೂ ನಂಬದಿರಿ. ಯಾಕೆಂದರೆ ವಂಚಕರು ಬ್ಯಾಂಕಿನ ನಕಲಿ ಗ್ರಾಹಕ ಸೇವಾ ನಂಬರ್‌ಗಳನ್ನು ಪಸರಿಸುತ್ತಿರುತ್ತಾರೆ ಅಥವಾ ವೆಬ್ ವಿಳಾಸಕ್ಕೆ ನಿಕಟವಾಗಿರುವ ಆನ್‌ಲೈನ್ ಯುಪಿಐ ಪ್ಲಾಟ್‌ಫಾರ್ಮ್‌ಗಳನ್ನು ಸೃಷ್ಟಿಸಿರುತ್ತಾರೆ. ನಿಮ್ಮ ಗೆಳೆಯರು ಅಥವಾ ಕುಟುಂಬದ ಸದಸ್ಯರಂತೆ ಸೋಗು ಹಾಕಿ ನಿಮ್ಮ ವೈಯಕ್ತಿಕ ಮಾಹಿತಿಗಳನ್ನು ಸಂಗ್ರಹಿಸುವವರ ಬಗ್ಗೆ ಯಾವತ್ತೂ ಮತ್ತೊಮ್ಮೆ ಪರಿಶೀಲಿಸುವ ಕೆಲಸವನ್ನು ಮಾಡಬೇಕು.

**ತೃತೀಯ ಪಕ್ಷದ ಸಾಧನಗಳು ಅಥವಾ ಅಂತರ್ಜಾಲ ಸಂಪರ್ಕಗಳು:** ನೀವು ಸಾಮಾನ್ಯವಾಗಿ ಹಣಕಾಸು ಸಂಸ್ಥೆಗಳಾದ ಬ್ಯಾಂಕುಗಳು, ಬ್ರೋಕರ್ ಮುಂತಾದವರು ಖಾತೆಗಳ ಆನ್‌ಲೈನ್ ಖಾತೆಗಳನ್ನು ನಿರ್ವಹಿಸುವ ವ್ಯವಸ್ಥೆಯನ್ನು ಹೊಂದಿರುತ್ತೀರಿ ಮತ್ತು ನಿಮ್ಮದೇ ಆದ ಮೊಬೈಲ್ ಸಾಧನಗಳು ಅಥವಾ ಕಂಪ್ಯೂಟರ್‌ಗಳ ಮೂಲಕ ಹಣಕಾಸುವ ವಹಿವಾಟುಗಳನ್ನು ನಿರ್ವಹಿಸುತ್ತೀರಿ. ಯಾವುದೇ ಸಂದರ್ಭದಲ್ಲಿ ತಪ್ಪಿಸಲಾಗದಿದ್ದರೆ ಲಾಗಿನ್ ಅಥವಾ ಸ್ವಯಂ-ಚಾಲಿತ ಲಾಗ್-ಔಟ್‌ನ್ನು ಆಯ್ಕೆ ಮಾಡಿಕೊಂಡಿಲ್ಲ ಎಂಬುದನ್ನು ಖಾತರಿ ಮಾಡಿಕೊಳ್ಳಿ ಹಾಗೂ

### ಯಾವತ್ತೂ ಸದೃಢ ಪಾಸ್‌ವರ್ಡ್ ರಹಸ್ಯವನ್ನು ಹೊಂದಿರಿ

**ನಿಮ್ಮ ಪಾಸ್‌ವರ್ಡ್‌ನ್ನು ಯಾರೊಂದಿಗೂ ಹಂಚಿಕೊಳ್ಳಬೇಡಿ. ನಿಮ್ಮ ಲಾಗಿನ್ ವಿವರಗಳನ್ನು ಹೊಂದಿರುವ ಯಾವುದೇ ದಾಖಲೆಗಳನ್ನು ಅಥವಾ ವೈಯಕ್ತಿಕ ವಿವರಗಳನ್ನು ಸುರಕ್ಷಿತವಲ್ಲದ ಪ್ರದೇಶದಲ್ಲಿ ಅಥವಾ ನಂಬಿಗಸ್ಥರಲ್ಲದ ವ್ಯಕ್ತಿಯ ಬಳಿ ಬಿಡಬೇಡಿ. name@1, ನಿಮ್ಮ ಜನ್ಮ ದಿನಾಂಕ, ಕುಟುಂಬ ಸದಸ್ಯರ ಹೆಸರು ಇತ್ಯಾದಿಯನ್ನು ಒಳಗೊಂಡ ಅತಿ ಸಾಮಾನ್ಯವಾದ ಪಾಸ್‌ವರ್ಡ್‌ಗಳು ಯಾವತ್ತೂ ಸುರಕ್ಷಿತವಲ್ಲ. ಅದನ್ನು ವೃತ್ತಿಪರರು ಕೆಲವೇ ಸೆಕೆಂಡ್‌ಗಳನ್ನು ಸುಲಭವಾಗಿ ಗುರುತಿಸಬಲ್ಲರು. ಸದೃಢವಾದ ಮತ್ತು ಯಾವತ್ತೂ ಹುಡುಕಲು ಸಾಧ್ಯವಾಗದ ಆದರೆ ನೆನಪಿಸಿಕೊಳ್ಳಲು ಸುಲಭವಾದ ಅಕ್ಷರಗಳು, ಸಂಖ್ಯೆಗಳು ಮತ್ತು ವಿಶೇಷ ಚಿಹ್ನೆಗಳನ್ನು ಒಳಗೊಂಡಿರುವ ಪಾಸ್‌ವರ್ಡ್ ಬಳಕೆ ಮಾಡುವುದು ಉತ್ತಮ. ನಿಮ್ಮ ಎಲ್ಲ ಪ್ರಾಥಮಿಕ ಸಾಮಾಜಿಕ ಮಾಧ್ಯಮ ಖಾತೆಗಳು, ಹಣಕಾಸು ಖಾತೆಗಳು, ನಿಮ್ಮ ಮೊಬೈಲ್ ಸಾಧನಗಳು, ನಿಮ್ಮ ಕಂಪ್ಯೂಟರ್/ಲ್ಯಾಪ್‌ಟಾಪ್ ಮತ್ತು ನಿಮ್ಮ ಮನೆ ಅಥವಾ ಕಚೇರಿಯ ವೈಫೈ ನೆಟ್‌ವರ್ಕ್‌ಗಳಿಗೆ ಬಲಿಷ್ಠವಾದ ಪಾಸ್‌ವರ್ಡ್ ಹೊಂದಿರುವುದು ಶ್ರೇಯಸ್ಕರ.**





# ಕ್ಲಿಕ್/ಡೌನ್‌ಲೋಡ್ ಮಾಡಬೇಡಿ

**ವಂಚಕರು/ಠಕ್ಕರ ದೊಡ್ಡ ದಂಡೇ ನಾನಾ ರೀತಿಯ ಪ್ರಲೋಭನೆಯೊಂದಿಗೆ ನಿಮ್ಮನ್ನು ಹಳ್ಳಕ್ಕೆ ಬೀಳಿಸಲು ನಿಮ್ಮ ವೆಬ್‌ಸೈಟ್‌ಗಳಲ್ಲಿ, ಈಮೇಲ್‌ಗಳಲ್ಲಿ ಕಾದು ಕುಳಿತಿರುತ್ತಾರೆ. ಟೆಕ್ಸ್ಟ್ ಮೆಸೇಜ್ ಮೂಲಕ, ಜಾಹೀರಾತು, ಉಚಿತ ವಿಷಯಗಳನ್ನು ಡೌನ್‌ಲೋಡ್ ಮಾಡಿ ಎನ್ನುವ ಆಮಿಷದ ಮೂಲಕ. ಸಂಶಯಾಸ್ಪದ ವೆಬ್‌ಸೈಟ್‌ಗಳಾದ ಗೇಮಿಂಗ್, ಸಾಫ್ಟ್‌ವೇರ್ ಡೌನ್‌ಲೋಡ್ ಮತ್ತು ವಾಟ್ಸಾಪ್ ಗ್ರೂಪ್‌ಗಳ ಮೂಲಕ ನಿಮ್ಮನ್ನು ಖೆಡ್ಡಕ್ಕೆ ಬೀಳಿಸಲು ಕಾದಿರುತ್ತಾರೆ. ಇಂತಹ ವಿಧಾನಗಳಿಂದ ಬಹುತೇಕ ದಾಳಿಕೋರರು ಸೂಕ್ಷ್ಮ ಮಾಹಿತಿಗಳನ್ನು ಬಹಿರಂಗಗೊಳಿಸುವ ಉದ್ದೇಶದೊಂದಿಗೆ ನಿಮ್ಮ ಕಂಪ್ಯೂಟರ್, ಮೊಬೈಲ್‌ಗಳಂಥ ಸಾಧನಗಳಿಗೆ ಸಂಶಯಾಸ್ಪದ ಸಾಫ್ಟ್‌ವೇರ್‌ಗಳನ್ನು ತುರುಕಿಸುವ ಪ್ರಯತ್ನವನ್ನು ಮಾಡುತ್ತಾರೆ. ಹಾಗಾಗಿ ಯಾವುದೇ ಅಪರಿಚಿತ/ನಂಬಿಕೆಗೆ ಅರ್ಹವಲ್ಲದ ಪೇಜ್‌ನಲ್ಲಿ ಅಥವಾ ರವಾನೆಕಾರರ ಫೈಲ್‌ನ್ನು ಡೌನ್‌ಲೋಡ್ ಮಾಡುವ ಅಥವಾ ಅಂಥವನ್ನು ಕ್ಲಿಕ್ ಮಾಡುವ ಸಂದರ್ಭದಲ್ಲಿ ಎಚ್ಚರಿಕೆಯಿಂದ ಇರಬೇಕು.**

ನೀವು ನಿಮ್ಮ ಖಾತೆಯಿಂದ ಪೂರ್ತಿಯಾಗಿ ಲಾಗ್-ಔಟ್ ಆಗಿದ್ದೀರಿ ಮತ್ತು ಆ ಬಳಿಕ ಟ್ಯಾಬ್ ಅಥವಾ ಬ್ರೌಸರ್‌ನ್ನು ಯಶಸ್ವಿಯಾಗಿ ಮುಚ್ಚಿದ್ದೀರಿ ಎಂಬುದನ್ನು ಪರಿಶೀಲಿಸಿಕೊಳ್ಳಿ. ಭದ್ರತೆ ಇಲ್ಲದ ಅಂತಹ ಕಂಪ್ಯೂಟರ್/ಸಾಧನಗಳಲ್ಲಿ ಸಾಫ್ಟ್‌ವೇರ್ ಸ್ಥಾಪನೆ ಮಾಡಿರಬಹುದು, ಇದು ನಿಮ್ಮ ಲಾಗಿನ್ ವಿವರಗಳನ್ನು ಮತ್ತು ಇತರ ವಿವರಗಳನ್ನು ಪಡೆದುಕೊಳ್ಳಬಹುದು. ಇಷ್ಟು ಮಾತ್ರವಲ್ಲದೆ ನಿಮ್ಮ ಹಳೆಯ ಮೊಬೈಲ್ ಸಾಧನವನ್ನು ಅಥವಾ ಕಂಪ್ಯೂಟರ್‌ನ್ನು ಸುಮ್ಮನೇ ಎಸೆದು ಬಿಡಬೇಡಿ ಅಥವಾ ಮರು-ಮಾರಾಟ ಮಾಡಬೇಡಿ. ಯಾರಿಗೇ ಆಗಲಿ ಅದನ್ನು ಹಸ್ತಾಂತರಿಸುವ ಮುನ್ನ ಅದರ ಹಾರ್ಡ್‌ಡ್ರೈವ್‌ನ್ನು ಅಳಿಸಿ ಹಾಕುವ ಅಥವಾ ಫಾರ್ಮ್ಯಾಟ್ ಮಾಡುವುದನ್ನು ಮರೆಯಬೇಡಿ.

**ಯಾವತ್ತೂ ಸ್ಮಾರ್ಟ್, ಪರಿಶೀಲಿಸಿದ ಆ್ಯಪ್‌ಗಳು ಮತ್ತು ವೆಬ್‌ತಾಣಗಳನ್ನು ಮಾತ್ರ ಬಳಸಿ:** ನೂರಾರು ಸೇವೆಗಳನ್ನು ತತ್‌ಕ್ಷಣ ಪಡೆಯಲು ಮೊಬೈಲ್ ಆ್ಯಪ್‌ಗಳು ಅತ್ಯುತ್ತಮ ಎಂಬುದರಲ್ಲಿ ಯಾವುದೇ ಮಾತಿಲ್ಲ. ಆದರೆ ಎಲ್ಲಾ ಆ್ಯಪ್‌ಗಳು ಸುಭದ್ರವಲ್ಲ. ಇಂದು ಮಕ್ಕಳು ತಮ್ಮ ಪಾಲಕರ ಮೊಬೈಲ್ ಫೋನ್‌ಗಳನ್ನು ಪಡೆದುಕೊಂಡು ಅನಗತ್ಯವಾದ ಗೇಮ್ ಅಪ್ಲಿಕೇಶನ್‌ಗಳನ್ನು ಡೌನ್‌ಲೋಡ್ ಮಾಡುವುದನ್ನು ಗಮನಿಸಿದ್ದೇವೆ. ಇವು ಯಾವುದೂ ನಮಗೆ ಪರಿಚಿತವಿರುವುದಿಲ್ಲ. ಹಾಗಾಗಿ ಅವು ಅನೇಕ ರೀತಿಯ ಅಪಾಯಗಳನ್ನು ಮೈಮೇಲೆ ಎಳೆದುಕೊಂಡಂತೆಯೇ ಸರಿ. ಯಾವತ್ತೂ ಯಾವುದೇ ಅಪರಿಚಿತ ಅಥವಾ ನಕಲಿ ಸಾಫ್ಟ್‌ವೇರ್ ಅಥವಾ ಅಪ್ಲಿಕೇಶನ್‌ಗಳನ್ನು ನಿಮ್ಮ ಕಂಪ್ಯೂಟರ್ ಮತ್ತು ಮೊಬೈಲ್‌ಗಳಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬೇಡಿ. ಒಂದು ಹೊಸ ಸಾಫ್ಟ್‌ವೇರ್ ನಿಮಗೆ ನಿಜಕ್ಕೂ ಅಗತ್ಯವಿದೆಯೇ ಮತ್ತು ಅದು ನಂಬಿಗಸ್ಥ ಮೂಲದಿಂದ ಬಂದಿದ್ದಾಗಿದೆಯೇ ಎಂಬುದನ್ನು ಎರಡೆರಡು ಬಾರಿ ಪರಿಶೀಲಿಸಬೇಕು. ಅಂತಹ ಸಾಫ್ಟ್‌ವೇರ್ ಯಾವುದೇ ವೃತ್ತಿಪರ ಅಥವಾ ಬೃಹತ್ ವೆಬ್‌ಸೈಟ್/ಡೆವಲಪರ್ ಎಂದು ಹೇಳಿಕೊಂಡರೂ ಕೂಡ ಅದನ್ನು ಮತ್ತೊಮ್ಮೆ ಪರಿಶೀಲಿಸುವುದು ಉತ್ತಮ. ಇದರ ಜೊತೆಗೇ ನೀವು ಬ್ರೌಸ್ ಮಾಡುತ್ತಿರುವುದು ನೈಜವಾದ ವೆಬ್‌ಸೈಟ್‌ಗಳಾಗಿದ್ದು ಮತ್ತು ಅದರಂತೆ ಹೋಲುವ ಯಾವುದೇ ನಕಲಿ ಸೈಟ್ ಅಲ್ಲ ಎಂಬುದನ್ನು ಖಾತರಿ ಮಾಡಿಕೊಳ್ಳಬೇಕು. ವೆಬ್‌ಸೈಟ್‌ನ ವಿಳಾಸವನ್ನು ನೋಡಿ ಅದನ್ನು ನೆನಪಿಸಿಕೊಳ್ಳುವ ಹವ್ಯಾಸವನ್ನು ಬೆಳೆಸಿಕೊಳ್ಳಬೇಕು. ಯುಆರ್‌ಎಲ್‌ನಲ್ಲಿ "https://" ಡೊಮೇನ್ ಹೆಸರನ್ನು ಹೊಂದಿರುವ ಸೈಟ್‌ಗಳು ಸುರಕ್ಷಿತವಾದುದಾಗಿವೆ.



**ಯುಪಿಐ ಸಂಬಂಧಿತ ವಂಚನೆಗಳು:** ಭಾರತದಲ್ಲಿ ಪಾವತಿ ವ್ಯವಸ್ಥೆಯಲ್ಲಿ ಆಮೂಲಾಗ್ರ ಪರಿವರ್ತನೆಯನ್ನು ಮಾಡಲು ಕಾರಣವಾಗಿದ್ದು ಯುಪಿಐ ಅಥವಾ ಯುನಿಫೈಡ್ ಪೇಮೆಂಟ್ ಇಂಟರ್‌ಫೇಸ್(Unified Payments Interface). ಇದರಲ್ಲಿ ನೀವು ಅಥವಾ ವ್ಯಾಪಾರಿ ಹಣವನ್ನು ಸಂಗ್ರಹ ಮಾಡಲು ಬಳಕೆದಾರರಿಗೆ ಮನವಿಯನ್ನು ಕಳುಹಿಸುವ ವಿಶೇಷತೆಗಳಿವೆ. ನಿಮಗೆ ತಂತ್ರಜ್ಞಾನದ ಬಗ್ಗೆ ಅಷ್ಟಾಗಿ ತಿಳಿಯದೇ ಇದ್ದರೆ ಅಥವಾ ನಿರಕ್ಷರಸ್ಥರಾಗಿದ್ದರೆ ದಯವಿಟ್ಟು ಇದನ್ನು ಬಳಸುವುದು ಹೇಗೆ ಎಂಬುದನ್ನು ಮೊದಲು ತಿಳಿದುಕೊಳ್ಳಿ. ನಕಲಿ ಶಾಪಿಂಗ್ ವೆಬ್‌ಸೈಟ್‌ನಲ್ಲಿ ಇಂತಹ ವೈಶಿಷ್ಟ್ಯತೆಗಳನ್ನೇ ವಂಚಕರು ತಮ್ಮ ಲಾಭಕ್ಕೆ ಬಳಸಿಕೊಳ್ಳುವ ಸಾಧ್ಯತೆಗಳಿರುತ್ತವೆ. ಇಲ್ಲಿ ನೆನಪಿಡಬೇಕಾದ ಒಂದು ಸಣ್ಣ ಸಲಹೆ ಏನೆಂದರೆ ನಿಮ್ಮ ಬ್ಯಾಂಕ್ ಖಾತೆಯಲ್ಲಿ ನಿಮಗೆ ಹಣ ಪಡೆಯುವಾಗ ನೀವು ಪಿನ್ ಅಥವಾ ಓಟಿಪಿಯನ್ನು ನೀಡಬೇಕಾದ ಅಗತ್ಯವಿರುವುದಿಲ್ಲ. ಅದೇ ರೀತಿ ಯುಪಿಐನಲ್ಲಿ ಕೂಡ ಹಣವನ್ನು ಸ್ವೀಕರಿಸುವ ಸಂದರ್ಭದಲ್ಲಿ ನೀವು ಯಾವುದೇ ಪಿನ್ ಸಂಖ್ಯೆಯನ್ನು ನೀಡಬೇಕಾಗಿಲ್ಲ. ಬ್ಯಾಂಕ್ ಎಟಿಎಂ ಪಿನ್ ಹೇಗಿರುತ್ತದೆಯೋ ಅದೇ ರೀತಿ ಈ ಪಿನ್ ಕೂಡ ಎಂದು ನೀವು ಪರಿಗಣಿಸಬೇಕು. ಇಲ್ಲದೇ ಹೋದರೆ ನೀವು ಹಣವನ್ನು ಪಡೆಯುವುದಕ್ಕೆ ಬದಲಾಗಿ ಪಾವತಿ ಮಾಡುವ ಸಂದರ್ಭ ಬಂದೀತು.




## ಒಟ್ಟಾರೆಯಾಗಿ

ನೀವು ಮಾಡುವ ಪ್ರತಿಯೊಂದು ಕೆಲಸದಲ್ಲಿಯೂ ಅಪಾಯ ಇದ್ದೇ ಇರುತ್ತದೆ. ರಸ್ತೆಯನ್ನು ದಾಟುವುದು, ವ್ಯಾಪಾರದಲ್ಲಿ ಭಾಗಿಯಾಗುವುದು ಅಥವಾ ಆನ್‌ಲೈನ್‌ನಲ್ಲಿ ಹೂಡಿಕೆಯನ್ನು ಮಾಡುವುದು... ಇವೆಲ್ಲವೂ ಜೀವನದ ಅವಿಭಾಜ್ಯ ಅಂಗ. ಜೀವನದಲ್ಲಿ ಇವನ್ನೆಲ್ಲ ತಪ್ಪಿಸಲು ಸಾಧ್ಯವಿಲ್ಲ. ಡಿಜಿಟಲ್ ವ್ಯವಸ್ಥೆಯಿಂದ ಅಳವಡಿಸಿಕೊಳ್ಳುವುದರಿಂದ ಆಗುವ ಪ್ರಯೋಜನ ಮತ್ತು ಜೀವನದ ಸುಗಮ ದಾರಿಯನ್ನು ಗಮನಿಸಿದರೆ ಅದರಿಂದಾಗುವ ಅಪಾಯ ಕಡಿಮೆ ಎಂದೇ ಹೇಳಬೇಕು. ಹಾಗಾಗಿ ಭಯಕ್ಕೆ ಒಳಗಾಗಿ ಅನುಭವದಿಂದ ದೂರಾಗುವ ಅಗತ್ಯವೇನೂ ಇಲ್ಲ. ಸಾಮಾಜಿಕ ಜಾಲ ತಾಣಗಳಲ್ಲಿ ಸಕ್ರಿಯವಾಗಿರಿ ಅಥವಾ ಆನ್‌ಲೈನ್ ವಹಿವಾಟನ್ನು ನಡೆಸುವುದರಿಂದ ಹಿಂಜರಿಯುವುದು ಬೇಡ. ಈ ಹೊಸ ಡಿಜಿಟಲ್ ಯುಗದ ಪ್ರಯೋಜನಗಳನ್ನು ಲಕ್ಷಾಂತರ ಮಂದಿ ಒಂದಲ್ಲ ಒಂದು ರೀತಿಯಲ್ಲಿ ಹಾಗೂ ಒಂದಲ್ಲ ಒಂದು ಹಂತದಲ್ಲಿ ಪಡೆದುಕೊಳ್ಳುತ್ತಿದ್ದಾರೆ. ಇಂದಿನ ಅಗತ್ಯ ಏನೆಂದರೆ ಡಿಜಿಟಲ್ ಜಗತ್ತಿನಲ್ಲಿರುವ ಅಪಾಯಗಳು, ಅಪರಾಧಗಳು ಹಾಗೂ ವಂಚನೆಗಳ ಬಗ್ಗೆ ಎಚ್ಚರಿಕೆಯಿಂದ ಇರುವುದು ಒಳಿತು. ಈ ಡಿಜಿಟಲ್ ಲೋಕದ ಬಗ್ಗೆ ತಿಳಿದುಕೊಳ್ಳುವುದು ಮತ್ತು ಯಾವುದನ್ನು ಮಾಡಬೇಕು ಮತ್ತು ಯಾವುದನ್ನು ಮಾಡಬಾರದು ಎಂಬುದರ ಬಗ್ಗೆ ಅಭ್ಯಾಸ ಮಾಡಿಕೊಂಡರೆ ಅಂತಹ ಅನುಭವಗಳು ನಿಮಗೆ ಮತ್ತು ನಿಮ್ಮ ಕುಟುಂಬದ ಸದಸ್ಯರಿಗೆ ಶ್ರೇಯಸ್ಕರ.



# ಬದುಕಿನ ಅನಿಶ್ಚಿತತೆ ಇರಲಿ ಟರ್ಮ್ ಇನ್ಶೂರೆನ್ಸ್ ಬಲ



**ಪಾಲಿಸಿಯ ಅವಧಿಯಲ್ಲಿ ಪಾಲಿಸಿದಾರನು ದುರಾದೃಷ್ಟವಶಾತ್ ಸಾವನ್ನಪ್ಪಿದರೆ ಹಣಕಾಸಿನ ಸುರಕ್ಷತೆಯನ್ನು ಒದಗಿಸುತ್ತದೆ. ಇಲ್ಲಿನ ಪ್ರಾಥಮಿಕ ಉದ್ದೇಶ ಏನೆಂದರೆ ಫಲಾನುಭವಿಗಳಿಗೆ ಅತ್ಯಧಿಕ ಹಣಕಾಸು ಸುರಕ್ಷತೆಯನ್ನು ನೀಡುವುದು. ಪರಿಪೂರ್ಣವಾದ ಸುರಕ್ಷತಾ ಯೋಜನೆಯನ್ನು ಹೊಂದಿರುವ ಈ ಅವಧಿ ವಿಮಾ ಪಾಲಿಸಿಯು ಅತಿ ಕಡಿಮೆ ಪ್ರೀಮಿಯಂ ದರದೊಂದಿಗೆ ಅತಿ ಹೆಚ್ಚು ವಿಮಾ ಸೌಲಭ್ಯವನ್ನು ಒದಗಿಸುತ್ತದೆ.**

ಸಾಕಷ್ಟು ಜೀವ ವಿಮಾ ಪಾಲಿಸಿಗಳನ್ನು ಹೊಂದುವುದು ಎಷ್ಟು ಮುಖ್ಯ ಎಂಬುದನ್ನು ಜನ ಇಂದು ಅರಿತುಕೊಳ್ಳುತ್ತಿದ್ದಾರೆ. ನಮ್ಮ ಜೀವನಕ್ರಮದ ಕಾರಣದಿಂದಾಗಿ ನಮ್ಮ ಸುತ್ತಮುತ್ತ ಇರುವ ಜೀವಗಳು ಎಷ್ಟು ಅನಿಶ್ಚಿತವಾಗಿವೆ ಎಂಬುದನ್ನು ನೋಡುತ್ತಿದ್ದೇವೆ. ಇತ್ತೀಚಿನ ಸಾಂಕ್ರಾಮಿಕ ರೋಗ (ಫ್ಯಾಂಡಮಿಕ್) ದ ಹಿನ್ನೆಲೆಯಲ್ಲಿ ಸಾಕಷ್ಟು ಹಣಕಾಸು ಬೆಂಬಲ/ಸೌಲಭ್ಯ ಮತ್ತು ಮನೆಯ ಯಜಮಾನನ ಅಥವಾ ಗಳಿಕೆದಾರನ ಅಗಲಿಕೆಯಲ್ಲಿ ಸ್ಥಿರತೆಯನ್ನು ಕಾಪಾಡಿಕೊಳ್ಳುವುದು ಎಷ್ಟು ಮುಖ್ಯ ಎಂಬುದು ನಮ್ಮ ಅನುಭವಕ್ಕೆ ಬಂದಿದೆ. ಈ ಹಿನ್ನೆಲೆಯಲ್ಲಿ ಒಂದು ಟರ್ಮ್ ಇನ್ಶೂರೆನ್ಸ್ ಯೋಜನೆಯನ್ನು ಹೊಂದುವುದು ಇನ್ಯಾವುದೇ ಯೋಜನೆಗಿಂತ ಹೆಚ್ಚಿನ ಮನಃಶ್ಶಾಂತಿಯನ್ನು ನೀಡುತ್ತದೆ ಮತ್ತು ಇದನ್ನು ಕಡ್ಡಾಯವಾಗಿ ಮಾಡಬೇಕಾಗಿದೆ. ಈ ಲೇಖನದಲ್ಲಿ ಅವಧಿ ವಿಮಾ ಪಾಲಿಸಿಯ ಬಗ್ಗೆ ವಿವರವಾಗಿ ತಿಳಿಸಿಕೊಡುತ್ತದೆ ಹಾಗೂ ಇಂದು ಅದರ ಮಹತ್ವ ಎಷ್ಟಿದೆ ಎಂಬುದನ್ನು ವಿವರಿಸುತ್ತದೆ.

**ಟರ್ಮ್ ಇನ್ಶೂರೆನ್ಸ್ ಎಂದರೆ ಏನು?:** ಅವಧಿ ವಿಮೆ ಎಂದರೆ ಪರಿಶುದ್ಧ ಜೀವ ವಿಮಾ ಪಾಲಿಸಿ. ಇದು ಪಾಲಿಸಿಯ ಅವಧಿಯಲ್ಲಿ ಪಾಲಿಸಿದಾರನು ದುರಾದೃಷ್ಟವಶಾತ್ ಸಾವನ್ನಪ್ಪಿದರೆ ಹಣಕಾಸಿನ ಸುರಕ್ಷತೆಯನ್ನು ಒದಗಿಸುತ್ತದೆ. ಇಲ್ಲಿನ ಪ್ರಾಥಮಿಕ ಉದ್ದೇಶ ಏನೆಂದರೆ ಫಲಾನುಭವಿಗಳಿಗೆ ಅತ್ಯಧಿಕ ಹಣಕಾಸು ಸುರಕ್ಷತೆಯನ್ನು ನೀಡುವುದು. ಪರಿಪೂರ್ಣವಾದ ಸುರಕ್ಷತಾ ಯೋಜನೆಯನ್ನು ಹೊಂದಿರುವ ಈ ಅವಧಿ ವಿಮಾ ಪಾಲಿಸಿಯು ಅತಿ ಕಡಿಮೆ ಪ್ರೀಮಿಯಂ ದರದೊಂದಿಗೆ ಅತಿ ಹೆಚ್ಚು ವಿಮಾ ಸೌಲಭ್ಯವನ್ನು ಒದಗಿಸುತ್ತದೆ. ಅವಧಿ ವಿಮಾ ಯೋಜನೆಯಲ್ಲಿರುವ ಪ್ರಮುಖ ಅಂಶಗಳು/ಪ್ರಯೋಜನಗಳನ್ನು ಇಲ್ಲಿ ಪಟ್ಟಿ ಮಾಡಲಾಗಿದೆ.



ಅವಧಿ ವಿಮಾ ಯೋಜನೆಯನ್ನು ಖರೀದಿ ಮಾಡುವುದರ ಪ್ರಯೋಜನಗಳು:

**ಕಡಿಮೆ ಪ್ರೀಮಿಯಂ–ಅತಿಹೆಚ್ಚು ಸೌಲಭ್ಯ:** ಅವಧಿ ವಿಮಾ ಯೋಜನೆಯು ಕನಿಷ್ಠ ಪ್ರೀಮಿಯಂನಲ್ಲಿ ಅತ್ಯಧಿಕ ಜೀವನ ಸುರಕ್ಷತೆಯನ್ನು ನೀಡುತ್ತದೆ. ಈ ವೈಶಿಷ್ಟ್ಯತೆಗಳು ಇದರಲ್ಲಿ ಯಾಕಿವೆ ಎಂದರೆ, ಇದರಲ್ಲಿ ಯಾವುದೇ ಹೂಡಿಕೆ ಅಂಶ ಇರುವುದಿಲ್ಲ ಅಥವಾ ಪೂರಕ ಸೇವೆಗಳು ಇರುವುದಿಲ್ಲ ಮತ್ತು ಪಾಲಿಸಿದಾರರು ಬದುಕಿದ್ದರೆ ಪಾಲಿಸಿ ಪೂರ್ಣಗೊಂಡ ಬಳಿಕ ಯಾವುದೇ ಹಣ ಮರಳಿ ಬರುವುದಿಲ್ಲ. ಇದರಿಂದಾಗಿ ಬಡವರು ಕೂಡ ಕೈಗೆಟಕುವ ಬೆಲೆಯಲ್ಲಿ ಅತ್ಯಧಿಕ ಜೀವನ ಸುರಕ್ಷತಾ ಸೌಲಭ್ಯವನ್ನು ಪಡೆಯಬಹುದಾಗಿದೆ ಮತ್ತು ಕುಟುಂಬಗಳಿಗೆ ಗರಿಷ್ಠ ಪ್ರಮಾಣದ ಹಣಕಾಸು ಭದ್ರತೆ ಮತ್ತು ಸ್ಥಿರತೆಯನ್ನು ಒದಗಿಸುತ್ತದೆ. ಈಗ ಕೆಲವು ವಿಮಾದಾರರು ನಿಗದಿತ ಮಧ್ಯಂತರದಲ್ಲಿ ಪೂರ್ವ–ನಿರ್ಧರಿತ ಶೇಕಡಾವಾರು ಪ್ರಮಾಣದ ಏರಿಕೆಯೊಂದಿಗೆ ಜೀವನ ಸುರಕ್ಷಾ ಸೌಲಭ್ಯದ ಹೆಚ್ಚಳದ ಆಯ್ಕೆಯನ್ನೂ ನೀಡುತ್ತಿದ್ದಾರೆ. ಇದರಿಂದ ಪಾಲಿಸಿದಾರರು ಆತ ಅಥವಾ ಆಕೆಯ ಆದಾಯದ ಏರಿಕೆಗೆ ತಕ್ಕಂತೆ ಜೀವನ ಸುರಕ್ಷಾ ಸೌಲಭ್ಯವನ್ನು ಹೆಚ್ಚಿಸಬಹುದಾಗಿದೆ.

**ಜೀವಮಾನಕ್ಕೆ ನಿಶ್ಚಿತ ಪ್ರೀಮಿಯಂಗಳು:** ಒಮ್ಮೆ ಅವಧಿ ವಿಮಾ ಪಾಲಿಸಿಯನ್ನು ನಿರ್ದಿಷ್ಟವಾದ ಪ್ರೀಮಿಯಂನಲ್ಲಿ ನೀಡಿದರೆ ನಿಶ್ಚಿತ ಸೌಲಭ್ಯವನ್ನು ಹೊಂದಿದ ಪಾಲಿಸಿಯ ಅವಧಿಯಲ್ಲಿ ಅಂತಹ ಪ್ರೀಮಿಯಂನಲ್ಲಿ ಯಾವುದೇ ಪರಿಷ್ಕರಣೆ ಅಥವಾ ಬದಲಾವಣೆಗಳನ್ನು ಮಾಡಲಾಗುವುದಿಲ್ಲ. ಅಂತಹ ಸಂದರ್ಭದಲ್ಲಿ ತೆರಿಗೆ ಅಂಶವನ್ನು ಹೊರತುಪಡಿಸಿ ಯಾವುದೇ ಬದಲಾವಣೆ ಇಲ್ಲದೆ ನಿಶ್ಚಿತ ಮೊತ್ತವನ್ನು ಪಾವತಿಸುವ ಭರವಸೆಯನ್ನು ನೀಡಲಾಗುತ್ತದೆ. ಅತ್ಯಧಿಕ ಅಥವಾ ಗರಿಷ್ಠ ಸೌಲಭ್ಯದ ಸಾಧ್ಯತೆ ಇರುವುದರಿಂದ ಪಾಲಿಸಿಯನ್ನು ಆರಂಭದಲ್ಲಿಯೇ ಪಡೆಯುವುದನ್ನು ಶಿಫಾರಸು ಮಾಡಲಾಗುವುದು. ಯಾಕೆಂದರೆ, ಪ್ರೀಮಿಯಂ ಆರಂಭಿಕ ವರ್ಷಗಳಲ್ಲಿ ದುಬಾರಿ ಎಂದು ಅನ್ನಿಸಿದರೂ ಕಾಲಕ್ರಮೇಣ ಇದು ಅಗ್ಗವಾಗುತ್ತದೆ. ಇದರ ಜೊತೆಗೆ ಇದರಲ್ಲಿ ಮಾಸಿಕ/ಅರ್ಧ–ವಾರ್ಷಿಕ/ವಾರ್ಷಿಕ ಪಾವತಿ ಆಯ್ಕೆಗಳು ಇರುವುದರಿಂದ ಪ್ರೀಮಿಯಂ ಪಾವತಿಯು ಹೆಚ್ಚು ಕೈಗೆಟಕುವಂತದ್ದಾಗಿದೆ.

**ಜೀವಮಾನಕ್ಕೆ ಭರಪೂರ ಸೌಲಭ್ಯ:** ಅವಧಿ ವಿಮಾ ಯೋಜನೆಗಳನ್ನು ಸುದೀರ್ಘ ಅವಧಿಗಾಗಿ ಪಡೆದುಕೊಳ್ಳಬಹುದು. ಅದರಿಂದ ನಿಮ್ಮ ಜೀವನದ ಪೂರ್ತಿ ದುಡಿಯುವ ಅವಧಿಯನ್ನು ಇದರಲ್ಲಿ ಸುಲಭವಾಗಿ ಒಳಗೊಳ್ಳುತ್ತದೆ. ಅಂದರೆ 60–65–70ರ ಬಳಿಕವೂ ಮತ್ತು 75ರ ವರ್ಷ ವಯಸ್ಸಿನ ವರೆಗೂ ಇದನ್ನು ವಿಸ್ತರಿಸಬಹುದಾಗಿದೆ. ಕೆಲವು ವಿಮಾದಾರರು ಪೂರ್ತಿ ಜೀವಮಾನದ, ಅಂದರೆ 99 ವರ್ಷ ವಯಸ್ಸು ಆಗುವ ತನಕವೂ ಸೌಲಭ್ಯದ ಆಯ್ಕೆಯನ್ನು ನೀಡುತ್ತಾರೆ. ಸಾಮಾನ್ಯವಾಗಿ ಅವಧಿಯನ್ನು ಅಗತ್ಯಕ್ಕೆ ತಕ್ಕಂತೆ ಆಯ್ಕೆ ಮಾಡಿಕೊಳ್ಳಲಾಗುತ್ತದೆ, ಆದರೆ ಇದು ಕನಿಷ್ಠ ನಿಮ್ಮ ದುಡಿಯುವ ಜೀವನವನ್ನು ಒಳಗೊಳ್ಳುವಂತಿರಬೇಕು ಅಥವಾ ಬಾಧ್ಯತೆಗಳನ್ನು ಹೊಂದಿರುವ ವರೆಗೆ ಆಯ್ಕೆ ಮಾಡಿಕೊಳ್ಳಬಹುದು.

**ಹದಿಹರಯದ ವಯಸ್ಸಿನಲ್ಲಿ ಅತ್ಯಲ್ಪ ಪ್ರೀಮಿಯಂ:** ಅವಧಿ ಯೋಜನೆಯ ಪ್ರೀಮಿಯಂ ಹೆಚ್ಚಾಗಿ ಪಾಲಿಸಿದಾರರ ವಯಸ್ಸಿನ ಮೇಲೆ ಮತ್ತು ಪಾಲಿಸಿಯ ಅವಧಿಯ ಮೇಲೆ ಅವಲಂಬಿತವಾಗಿರುತ್ತದೆ. ಯಾಕೆಂದರೆ ಇದು ಪಾಲಿಸಿಯ ಅವಧಿಯಲ್ಲಿ ಉದ್ಭವಿಸಬಹುದಾದ ಕ್ಲೈಮ್‌ನ ಸಾಧ್ಯತೆಯ ಮೇಲೆ ನೇರವಾಗಿ ಪರಿಣಾಮವನ್ನು ಬೀರುತ್ತದೆ. ಹದಿಹರಯದ ವಯೋಮಾನದ ಗುಂಪಿನಲ್ಲಿ ಸಾವಿನ ಸಾಧ್ಯತೆಗಳು ಅತ್ಯಂತ ಕಡಿಮೆಯಾಗಿರುವುದರಿಂದ ಪ್ರೀಮಿಯಂ ಕೂಡ ಕಡಿಮೆಯಾಗಿರುತ್ತದೆ. ಒಂದು ನಿಗದಿತ ಅವಧಿಯ ಬಳಿಕ ಸಂಭವನೀಯತೆ ಹೆಚ್ಚುವ ಕಾರಣ ಪ್ರತಿ ವರ್ಷ ಪ್ರೀಮಿಯಂ ಕೂಡ ಹೆಚ್ಚುತ್ತ ಹೋಗುತ್ತದೆ. ಈ ಎಲ್ಲ ಹಿನ್ನೆಲೆಯಲ್ಲಿ ನಿಮ್ಮ ಜೀವನದಲ್ಲಿ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಈ ಅವಧಿ ವಿಮಾ ಯೋಜನೆಯನ್ನು ಪಡೆದುಕೊಳ್ಳುವುದು ಸೂಕ್ತ.

**ನಿರ್ದಿಷ್ಟ ಅಗತ್ಯಗಳಿಗೆ ತಕ್ಕಂತೆ ಕಡಿಮೆ ಸೌಲಭ್ಯದ ತುಲನೆ**

**ಮಾಡಿ:** ನಾವು ಆಗಾಗ ನಮ್ಮ ಅಗತ್ಯಗಳಿಗೆ ತಕ್ಕಂತೆ ಸಾಲವನ್ನು ಪಡೆದುಕೊಳ್ಳುತ್ತೇವೆ. ಅದು ಗೃಹ ಸಾಲ, ವೈಯಕ್ತಿಕ ಸಾಲ ಅಥವಾ ವ್ಯಾಪಾರದ ಸಾಲವಾಗಿರಬಹುದು. ಹಾಗೆ ಪಡೆದ ಸಾಲದ ಮೊತ್ತವು ಅಧಿಕ ಪ್ರಮಾಣದ್ದಾಗಿದ್ದರೆ ಅದು ನಿಮ್ಮ ಕುಟುಂಬದ ಮೇಲೆ ಬಹುದೊಡ್ಡ ಹೊರೆಯಾಗಿ ಪರಿಣಮಿಸಬಹುದು. ಅಂತಹ ಪ್ರಮೇಯ ಬಂದರೆ ಈ ಅಪಾಯವನ್ನು ಕೂಡ ಒಳಗೊಳ್ಳುವಂತೆ ಮಾಡಲು ಹೆಚ್ಚುವರಿ ಅವಧಿ ವಿಮಾ ಯೋಜನೆಯನ್ನು ಪಡೆದುಕೊಳ್ಳುವುದು ಸೂಕ್ತ. ನಿಮ್ಮ ಸಾಲದ ಮೊತ್ತಕ್ಕೆ ಹಾಗೂ ಅದರ ಅವಧಿಗೆ ಸರಿಸಮಾನವಾದ ರೀತಿಯಲ್ಲಿ ಅವಧಿ ವಿಮಾ ಯೋಜನೆಗಳನ್ನು ಪಡೆದುಕೊಳ್ಳಿ. ಇದರಿಂದ ನಿಮ್ಮ ಕುಟುಂಬ ಸಾಲವನ್ನು ಮರುಪಾವತಿ ಮಾಡಲು ಅನುಕೂಲವಾಗುತ್ತದೆ ಮತ್ತು ಅವರ ಜೀವನದ ಗುರಿಗಳನ್ನು ಯಾವುದೇ ರೀತಿಯಲ್ಲಿ ರಾಜಿ ಮಾಡಿಕೊಳ್ಳುವ ಅಗತ್ಯವಿರುವುದಿಲ್ಲ. ಇದೇ ಸಂದರ್ಭದಲ್ಲಿ ನೀವು ಸುದೀರ್ಘಾವಧಿಗೆ ಹೆಚ್ಚುವರಿ ಅವಧಿ ಪಾಲಿಸಿಯನ್ನು ಆಯ್ಕೆ ಮಾಡಿಕೊಳ್ಳಬಹುದು. ಇದು ವಿಶೇಷವಾಗಿ ಬಹು ಅಥವಾ ಅನುಕ್ರಮದ ಸಾಲವನ್ನು ಒಳಗೊಳ್ಳುತ್ತದೆ.

ಹೆಚ್ಚುವರಿ ಸೌಲಭ್ಯಗಳ ಸೇರ್ಪಡೆ: ಅವಧಿ ವಿಮಾ ಯೋಜನೆಗಳಲ್ಲಿ ಹೆಚ್ಚುವರಿ ಐಚ್ಛಿಕ ಸೌಲಭ್ಯಗಳನ್ನು ಕನಿಷ್ಠ ವೆಚ್ಚದೊಂದಿಗೆ ಸೇರಿಸಬಹುದು. ಮೂಲ ಯೋಜನೆಗೆ ಹೆಚ್ಚುವರಿಯಾಗಿ ಸೇರ್ಪಡೆಗೊಳಿಸುವುದು ಮಹತ್ವದ ಅಂಶವಾಗಿದ್ದು ಇದರಿಂದ ಅಗತ್ಯಕ್ಕೆ ತಕ್ಕಂತೆ ಗ್ರಾಹಕರ ಸೌಲಭ್ಯಕ್ಕೆ ಅನುಗುಣವಾದ ಆಯ್ಕೆಯನ್ನು ನೀಡಲು ಅನುಕೂಲವಾಗುತ್ತದೆ. ಇವುಗಳಲ್ಲಿ ಜನಪ್ರಿಯ ಸೇರ್ಪಡೆ ಎಂದರೆ ಈ ಕೆಳಗಿನವು ಸೇರಿವೆ:

**ತೀವ್ರತರದ ಅಸ್ವಸ್ಥತೆಯ ಸೌಲಭ್ಯ:**ಈ ವಿಶೇಷತೆಯು ಕ್ಯಾನ್ಸರ್, ಹೃದಯಾಘಾತ ಮತ್ತು ಕಿಡ್ನಿ ವೈಫಲ್ಯದಂತಹ ಜೀವಕ್ಕೆ ಮಾರಕವಾದ ರೋಗಗಳ ವಿರುದ್ಧ ಹೆಚ್ಚುವರಿ ರಕ್ಷಣೆಯನ್ನು ನೀಡುತ್ತದೆ. ಇಂತಹ ತೀವ್ರತರದ ಅಸ್ವಸ್ಥತೆ ಇದ್ದ ಪಕ್ಷದಲ್ಲಿ ಸಾಮಾನ್ಯವಾಗಿ ಒಂದು ನಿಶ್ಚಿತ ಮೊತ್ತವನ್ನು ಪಾವತಿ ಮಾಡಬೇಕಾಗುತ್ತದೆ. ಕೆಲವು ವಿಮಾದಾರರು ನಿರ್ದಿಷ್ಟ ರೋಗಗಳಿಗೂ ಹೆಚ್ಚುವರಿ ಸೌಲಭ್ಯದ ಅವಕಾಶ ನೀಡಬಹುದು.

**ಅಪಘಾತದಿಂದಾಗುವ ಸಾವಿಗೆ ಸೌಲಭ್ಯ:** ಜೀವ ವಿಮೆಗೆ ಒಳಗಾದವರು ದುರದೃಷ್ಟಕರವಾಗಿ ಅಪಘಾತದಿಂದ ಮೃತಪಟ್ಟರೆ ಇಂತಹ ಸೌಲಭ್ಯದಿಂದ ನಾಮಿನಿಗೆ ಅಧಿಕ ಹಣದ ಪಾವತಿ ಮಾಡಲಾಗುತ್ತದೆ.

**ಪ್ರೀಮಿಯರ್ ಮನ್ನಾ ಸೌಲಭ್ಯ:**ಇಂತಹ ಸೌಲಭ್ಯದಲ್ಲಿ, ಒಂದು ವೇಳೆ ಅಪಘಾತದಿಂದ ಶಾಶ್ವತ ಅಂಗವಿಕಲತೆ ಸಂಭವಿಸಿದರೆ ಅಥವಾ ತೀವ್ರತರದ ಅಸ್ವಸ್ಥತೆ ಕಾಣಿಸಿಕೊಂಡರೆ ಅಲ್ಲಿಂದ ಮುಂದಿನ ಎಲ್ಲ ಪ್ರೀಮಿಯಂನ್ನು ಮನ್ನಾ ಮಾಡಲಾಗುತ್ತದೆ ಮತ್ತು ಉಳಿದ ಪಾಲಿಸಿ ಅವಧಿಗೆ ಜೀವ ವಿಮಾ ಸೌಲಭ್ಯ ಮುಂದುವರಿದಿರುತ್ತದೆ. ಕೆಲವು ವಿಮಾದಾರರು ಪಾಲಿಸಿದಾರರಿಗೆ ಯಾವುದೇ ಹೆಚ್ಚುವರಿ ಮೊತ್ತ ಇಲ್ಲದೆ ಪಾಲಿಸಿಯೊಳಗಿನ ವೈಶಿಷ್ಟತೆಯಾಗಿ ಈ ಸೌಲಭ್ಯವನ್ನು ಒದಗಿಸಬಹುದು.

## ಖರೀದಿ ಸುಲಭ

**ಅವಧಿ ವಿಮಾ ಯೋಜನೆಯನ್ನು ಖರೀದಿ ಮಾಡುವುದು ಅತ್ಯಂತ ಸುಲಭ. ಸಾಮಾನ್ಯವಾಗಿ ಯಾವುದೇ ಕಾಯಿಲೆ ಇಲ್ಲದ ಹದಿಹರಯದವರಿಗೆ ವೈದ್ಯಕೀಯ ಪರೀಕ್ಷೆ ಅಥವಾ ತಪಾಸಣೆ ಕಡ್ಡಾಯವೇನೂ ಆಗಿರುವುದಿಲ್ಲ. ಇಂತಹುದೊಂದು ಪಾಲಿಸಿಯನ್ನು ಪಡೆದುಕೊಳ್ಳಲು ನಿಮ್ಮ ವಿಮಾ ಸಲಹೆಗಾರರನ್ನು ಸಂಪರ್ಕಿಸಿ ಮತ್ತು ಲಭ್ಯವಿರುವ ಆಯ್ಕೆಗಳ ಬಗ್ಗೆ ಪರಿಶೀಲನೆಯನ್ನು ನಡೆಸಿ ಹಾಗೂ ನಿಮಗೆ ಯಾವ ಯೋಜನೆ ಸೂಕ್ತವೋ ಅದನ್ನು ಆಯ್ಕೆ ಮಾಡಿಕೊಳ್ಳಿ.**



**ಅಂತಿಮ ರೋಗದ ಸೌಲಭ್ಯ:** ಈ ಸೌಲಭ್ಯದಲ್ಲಿ ವಿಮೆಯನ್ನು ಪಡೆದ ವ್ಯಕ್ತಿಗೆ ಮಾರಣಾಂತಿಕ ಅಥವಾ ಅಂತಿಮ ರೋಗವಿರುವುದು ಪತ್ತೆಯಾದರೆ ಸಾವಿನ ನಂತರ ಸಿಗುವ ಪೂರ್ಣ ಹಣಕಾಸು ಸೌಲಭ್ಯವನ್ನು ಪಾವತಿ ಮಾಡಲಾಗುತ್ತದೆ. ಕೆಲವು ವಿಮಾದಾರರು ಪಾಲಿಸಿದಾರರಿಗೆ ಯಾವುದೇ ಹೆಚ್ಚುವರಿ ಮೊತ್ತ ಇಲ್ಲದೆ ಪಾಲಿಸಿಯೊಳಗಿನ ವೈಶಿಷ್ಟತೆಯಾಗಿಯೂ ಈ ಸೌಲಭ್ಯವನ್ನು ಒದಗಿಸಬಹುದು.

**ಆದಾಯ ತೆರಿಗೆ ಪ್ರಯೋಜನಗಳು:** ಅಂತಿಮವಾಗಿ ಈ ಅವಧಿ ವಿಮೆಯೊಂದಿಗೆ ತೆರಿಗೆ ಪ್ರಯೋಜನಗಳನ್ನು ಕೂಡ ಪಡೆಯಬಹುದು. ಆದಾಯ ತೆರಿಗೆ ಕಾಯ್ದೆ 1961ರ 80ಸಿ ಸೆಕ್ಷನ್ ಅಡಿಯಲ್ಲಿ ವಾರ್ಷಿಕ 1,50,000 ಲಕ್ಷದ ತನಕ ಕಡಿತವನ್ನು ಪಡೆಯಲು ಅವಕಾಶವಿರುತ್ತದೆ. ಇದರ ಜೊತೆಗೆ, ಒಂದು ವೇಳೆ ದುರದೃಷ್ಟವಶಾತ್ ಸಾವು ಸಂಭವಿಸಿದರೆ ನಿಮ್ಮ ನಾಮಿನಿಗೆ ಪಾವತಿ ಮಾಡುವ ಸಾವಿನ ನಂತರದ ಸೌಲಭ್ಯ ಮತ್ತು ಹೆಚ್ಚುವರಿ ಪಾವತಿಯು ಸೆಕ್ಷನ್ 10 (10ಡಿ) ಅಡಿಯಲ್ಲಿ ತೆರಿಗೆ ಮುಕ್ತವಾಗಿರುತ್ತದೆ. ಆದರೆ, ಯಾವುದೇ ವಿಮೆಯನ್ನು ಖರೀದಿ ಮಾಡುವುದಕ್ಕೆ ಮುನ್ನ ತೆರಿಗೆ ಪ್ರಯೋಜನವನ್ನು ನಿರ್ಧಾರ ಕೈಗೊಳ್ಳುವಲ್ಲಿ ಪ್ರಾಥಮಿಕ ಅಂಶವಾಗಿ ಪರಿಗಣಿಸಲಾಗುವುದಿಲ್ಲ.

**ಒಟ್ಟಾರೆಯಾಗಿ:** ಪರಿಪೂರ್ಣವಾದ ಸುರಕ್ಷತಾ ಯೋಜನೆಯಿಂದ ದೊರೆಯುವ ಹಣಕಾಸು ಭದ್ರತೆ ಮತ್ತು ಸ್ಥಿರತೆಗೆ ಸರಿಸಾಟಿಯಾದುದು ಯಾವುದೂ ಇಲ್ಲ. ಗಳಿಕೆಯನ್ನು ಆರಂಭಿಸಿದ ಯಾವುದೆ ಒಬ್ಬ ಸೂಕ್ಷ್ಮ ಮನಸ್ಸಿನ ವ್ಯಕ್ತಿಯು ಸಾಕಷ್ಟು ಪ್ರಮಾಣದ ಅವಧಿ ವಿಮಾ ಪಾಲಿಸಿಯನ್ನು ಪಡೆದುಕೊಳ್ಳಲು ಹೆಚ್ಚಿನ ಪ್ರಾಶಸ್ತ್ಯವನ್ನು ನೀಡುತ್ತಾನೆ. ಆ ಬಳಿಕ ಮದುವೆ, ಮಗುವಿನ ಜನನ, ಹೊಸ ಮನೆಯ ಖರೀದಿ ಇತ್ಯಾದಿ ಜೀವನದ ಪ್ರತಿಯೊಂದು ಮುಖ್ಯ ಘಟನೆಯ ಸಂದರ್ಭದಲ್ಲಿ ಅದನ್ನು ಹೆಚ್ಚಿಸುತ್ತ ಹೋಗುತ್ತಾನೆ. ತನ್ನ ಕುಟುಂಬಕ್ಕೆ ತಕ್ಕ ಪ್ರಮಾಣದ ಆರಾಮವನ್ನು ನೀಡಲು ಇಂದಿನ ದಿನಮಾನದಲ್ಲಿ ಕನಿಷ್ಠ 50 ಲಕ್ಷ ರೂಪಾಯಿ ವಿಮಾ ಸೌಲಭ್ಯವನ್ನು ಪಡೆಯುವುದು ಅತ್ಯಂತ ಮುಖ್ಯ. ಸಾಮಾನ್ಯವಾಗಿ, ಈ ವಿಮಾ ಸೌಲಭ್ಯದಲ್ಲಿ ನಿಮ್ಮ ವಾರ್ಷಿಕ ಆದಾಯದಲ್ಲಿ ಕನಿಷ್ಠ ಹತ್ತು ಪಟ್ಟು ಮತ್ತು ಎಲ್ಲ ಬಾಕಿ ಇರುವ ಬಾಧ್ಯತೆಗಳನ್ನು ಗುರಿಯಾಗಿಟ್ಟುಕೊಂಡು ಈ ಪಾಲಿಸಿಯನ್ನು ಪಡೆಯಬಹುದು. ಇದರ ಜೊತೆಗೆ, ಅವಧಿ ವಿಮಾ ಪಾಲಿಸಿಯನ್ನು ಖರೀದಿ ಮಾಡುವ ಸಂದರ್ಭದಲ್ಲಿ ಹೆಚ್ಚುವರಿ ವಿಶೇಷತೆಗಳನ್ನು ಒಳಗೊಂಡ, ಗ್ರಾಹಕರ ಆದ್ಯತೆ–ಯ ಆಯ್ಕೆಗಳನ್ನು ಮಾಡಿಕೊಳ್ಳುವುದು ಅತ್ಯಂತ ಮುಖ್ಯ. ಈ ವಿಷಯದಲ್ಲಿ ಹೆಚ್ಚಿನ ಮಾಹಿತಿಯನ್ನು ತಿಳಿದುಕೊಳ್ಳಲು ನಿಮ್ಮ ವಿಮಾ ಸಲಹೆಗಾರರೊಂದಿಗೆ ಸಂಪರ್ಕದಲ್ಲಿರಿ. ನಿಮ್ಮ ಮಾನಸಿಕ ನೆಮ್ಮದಿ ಹಾಗೂ ಕುಟುಂಬದ ಸದಸ್ಯರ ಸಂತೋಷದ ದೃಷ್ಟಿಯಿಂದ ಅವಧಿ ವಿಮಾ ಯೋಜನೆ ಎನ್ನುವುದು ಅತ್ಯಂತ ಕಡಿಮೆ ಮೊತ್ತ.

**ಇನ್‌ಸ್ಪೈರ್ ಇಂಡಿಯಾ ವೆಲ್ತ್ ಪ್ರೈವೇಟ್ ಲಿ.**
**(ARN–79020)**
**ಎಎಂಎಫ್ಐ ನೋಂದಾಯಿತ ಮ್ಯೂಚುಯಲ್ ಫಂಡ್ ವಿತರಕರು**
ನಮ್ಮ ಸಂಪರ್ಕ: 9148319207, 080–42129917
ಇ–ಮೇಲ್: Mail: info@inspireindiafs.com

**ವಿಳಾಸ**
**INSPIRE INDIA WEALTH PVT LTD**
@ 65, 'Surasa Enclave'
1st Floor, Puttanna Road,
Gandhi Bazar, Basavanagudi
Bengaluru-560004

**ನಮ್ಮ ಸೇವೆಗಳು**

1. ಮ್ಯೂಚುಯಲ್ ಫಂಡ್ಸ್
2. ಸ್ಟಾಕ್ ಬ್ರೋಕಿಂಗ್
3. ವಿಮೆ
4. ಪ್ರಾಪರ್ಟಿ ಇನ್ವೆಸ್ಟ್‌ಮೆಂಟ್ಸ್
5. ತೆರಿಗೆ ಉಳಿತಾಯ ಬಾಂಡ್ ಗಳು
6. ಫೈನಾನ್ಸಿಯಲ್ ಕನ್ಸಲ್ಟಿಂಗ್ & ಪ್ಲಾನಿಂಗ್
7. ವೆಲ್ತ್ ಮ್ಯಾನೇಜ್ಮೆಂಟ್
8. ಹಣಕಾಸು ಮೌಲ್ಯಮಾಪನ
9. ತೆರಿಗೆ ಸಲ್ಲಿಕೆ
10. ವಿಲ್ ಬರವಣಿಗೆ

**ಡಿಸ್ಕ್ಲೈಮರ್**

ಈ ವಾರ್ತಾಪತ್ರದ ಸಂಕಲನ ಮಾಡುವ ಸಂದರ್ಭದಲ್ಲಿ ನಾವು ಎಲ್ಲ ರೀತಿಯ ಕಾಳಜಿ ಮತ್ತು ಎಚ್ಚರಿಕೆಯನ್ನು ವಹಿಸಿರುತ್ತೇವೆ. ಇಲ್ಲಿನ ಮಾಹಿತಿಗಳನ್ನು ಹಲವು ನಂಬಿಕೆಗೆ ಅರ್ಹವಾದ ಮೂಲಗಳಿಂದ ಪಡೆದಿರುತ್ತೇವೆ. ಆದರೆ, ಯಾವುದೇ ಮಾಹಿತಿಯ ಖಚಿತತೆ, ಅರ್ಹತೆ ಅಥವಾ ಪರಿಪೂರ್ಣತೆಯ ಬಗ್ಗೆ ಖಾತರಿಯನ್ನು ನೀಡುವುದಿಲ್ಲ. ಹಾಗಾಗಿ ಇಂತಹ ಮಾಹಿತಿ ಬಳಕೆಯಿಂದ ಆಗಬಹುದಾದ ಯಾವುದೇ ದೋಷ ಅಥವಾ ಲೋಪಗಳಿಗೆ ಜವಾಬ್ದಾರರಾಗಿರುವುದಿಲ್ಲ. ಈ ವಾರ್ತಾಪತ್ರದಲ್ಲಿ ತಿಳಿಸಲಾದ, ಚರ್ಚಿಸಲಾದ ಅಥವಾ ಶಿಫಾರಸು ಮಾಡಲಾದ ಯಾವುದೇ ಯೋಜನೆಗಳಿಗೆ ಸಂಬಂಧಿಸಿದಂತೆ ಹೂಡಿಕೆಯನ್ನು ಮಾಡುವ ಸಮರ್ಪಕತೆಯ ಬಗ್ಗೆ ಹೂಡಿಕೆದಾರರು ಸೂಕ್ತವಾದ ಹಣಕಾಸು ಸಲಹೆಗಳನ್ನು ಪಡೆಯಬೇಕು ಮತ್ತು ಭವಿಷ್ಯದ ನಿರೀಕ್ಷೆಗಳ ಬಗ್ಗೆ ನೀಡಿರುವ ಹೇಳಿಕೆಗಳು ಕಾರ್ಯರೂಪಕ್ಕೆ ಬರಬಹುದು ಅಥವಾ ಬಾರದೇ ಇರಬಹುದು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಮ್ಯೂಚುಯಲ್ ಫಂಡ್ ಹೂಡಿಕೆಗಳು ಯಾವತ್ತೂ ಮಾರುಕಟ್ಟೆಗೆ ಸಂಬಂಧಿಸಿದ ಅಪಾಯದ ವ್ಯಾಪ್ತಿಗೆ ಒಳಪಟ್ಟಿರುತ್ತವೆ. ಹಾಗಾಗಿ ಹೂಡಿಕೆಯನ್ನು ಮಾಡುವುದಕ್ಕೂ ಮುನ್ನ ನಿಮಗೆ ನೀಡಲಾದ ದಾಖಲೆಗಳನ್ನು ದಯವಿಟ್ಟು ಅತ್ಯಂತ ಎಚ್ಚರಿಕೆಯಿಂದ ಓದಿಕೊಳ್ಳಿ. ಹಿಂದಿನ ನಿರ್ವಹಣೆಯು ಕೇವಲ ಸೂಚಕ ಉದ್ದೇಶವನ್ನು ಹೊಂದಿದ್ದು ಅದು ಯಾವುದೇ ಕಾರಣಕ್ಕೂ ಭವಿಷ್ಯಕ್ಕೆ ಮಾರ್ಗದರ್ಶಕವಾಗಿರುವುದಿಲ್ಲ ಎಂಬುದನ್ನು ಅರ್ಥಮಾಡಿಕೊಳ್ಳಬೇಕು.


**ಸಾಮಾನ್ಯವಾಗಿ ದುರ್ಗಮ ರಸ್ತೆಗಳು ಚೆಂದದ ಗುರಿಗಳನ್ನು ಮುಟ್ಟಿಸುತ್ತವೆ. ಯಾವತ್ತೂ ಹೂಡಿಕೆಯನ್ನು ಮಾಡುತ್ತಿರಿ ಮತ್ತು ಅದನ್ನು ಈಗಲೇ ಆರಂಭಿಸಿ.**

# WHY SHOULD YOU INVEST IN AN ELSS FUNDS?

- ELSS has the minimum lock-in period of three amongst all tax saving instruments
- The long term capital appreciated is tax free in hands of the investor, while in case of other tax saving instruments like Bank FD or NSC etc. the interest is taxable. Though interest earned on PPF is also tax free, but the tenure of PPF is 15 years as compared with 3 years for ELSS.
- Excellent opportunity to create wealth is growing Indian stock markets.
- You can opt for SIP option in ELSS, if you dont want to invest a huge amount in one go. It will also bring in discipline in investing.

## COMPARISON

Let's compare the following tax saving options u/s 80C...



# Advisory Board of Inspire India


Karthik Kumar R K


Shiva Kumar H N


B M Rajaprakash


Divakar P Sastry


Prabhakar K


Ravindra S D


Veeresha Mattur


Shivakumar Odeyar


Karthik K N


Raghavendra Shetty


Anil Ashwini


Sudarshan M V


Puneeth Kumar

## ಹೊಸ ವರ್ಷದ ಹಾಗು
## ಮಕರ ಸಂಕ್ರಾಂತಿ ಹಬ್ಬದ ಶುಭಾಶಯಗಳು.

**ಈ ವರ್ಷ ನೀವು ನಡೆಯುವ ಪ್ರತಿ ಹೆಜ್ಜೆಯು ಯಶಸ್ಸಿನ ಪಾಠವಾಗಲಿ. ಈ ವರ್ಷ ಹೆಚ್ಚು ಹೆಚ್ಚು ಸಂತೋಷ ಮತ್ತು ವಿನಿಯೋಗಕ್ಕೆ ದಾರಿಯಾಗಲಿ ಎಂದು ಆಶಿಸುವ ನಿಮ್ಮ ಆರ್ಥಿಕ ತಜ್ಞ...**

**ಶರಣ್ ಪಾಟೀಲ್ ಮತ್ತು ಇನ್ಸ್ಪೈರ್ ಇಂಡಿಯಾ ತಂಡ!**